# ತಪೋವಾಣಿ

ಸಂ. 6 ಸಂ. 4 ಏಪ್ರಿಲ್ 2009 ರೂ.15

**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.

★ ಪ್ರೀತಿ ನಮ್ಮ ಸ್ವಭಾವ.

★ ಮೌನ ನಮ್ಮ ಭಾಷೆ.

★ ಧ್ಯಾನ ನಮ್ಮ ಮಾರ್ಗ.

★ ಈ ಪ್ರಪಂಚ ನಮ್ಮ ಆಶ್ರಮ.

★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

ಏಕಕಾಲದಲ್ಲಿ ಎಲ್ಲರೂ ಒಟ್ಟಿಗೆ ಬೆಳಕನ್ನು ಚಾನಲ್ ಮಾಡುವ 2009 ಫೆಬ್ರವರಿ 26ರ ಸಮಾರಂಭ ಮುಗಿದಿದೆ. ಆದರೆ ಸಂಚಲನ ಮುಂದುವರಿಯುತ್ತದೆ. ನಮ್ಮ ನಮ್ಮ ಸ್ಥಳಗಳಿಂದ ಪ್ರತಿನಿತ್ಯ ಬೆಳಕನ್ನು ಚಾನಲ್ ಮಾಡುವುದು ಮುಂದುವರಿಯುತ್ತದೆ. ನಮ್ಮ ಸುಂದರವಾದ ಭೂಮಿಯನ್ನು ಹೀಲಿಂಗ್ ಮಾಡುವುದಕ್ಕಾಗಿ, ಅದರಲ್ಲಿ ಶಾಂತಿ ಮತ್ತು ಪ್ರೀತಿ ನೆಲೆಸುವುದಕ್ಕಾಗಿ. ಈ ಸಂಚಲನ ನಿರಂತರವಾಗಿ ಮುಂದುವರಿಯುತ್ತದೆ.

ಆ ದಿನ ಬೆಂಗಳೂರಿನಲ್ಲಿರುವ ಕೋರಮಂಗಲ ಸ್ಟೇಡಿಯಂನಲ್ಲಿ ಸೇರಿದ್ದ ನೂರಾರು ಜನರೊಂದಿಗೆ ಪ್ರಪಂಚದೆಲ್ಲೆಡೆಯಿಂದ ಮುಖ್ಯವಾಗಿ ರಷ್ಯಾ, ಅಮೆರಿಕಾ, ಮಧ್ಯಪ್ರಾಚ್ಯ, ಮೊರಾಕ್ಕೋ, ಆಸ್ಟ್ರೇಲಿಯಾ ಮತ್ತು ನ್ಯೂಝಿಲೆಂಡ್‌ಗಳಿಂದ ಸಾವಿರಾರು ಜನರು ಜೊತೆಗೂಡಿ 7 ನಿಮಿಷಗಳು ಬೆಳಕನ್ನು ಚಾನಲ್ ಮಾಡಿದರು. ಆ ಸಮಯದಲ್ಲಿ ಒಂದು ಮಹಾನ್ ಚೈತನ್ಯ ಈ ಭೂಮಿಗೆ ಇಳಿಯಿತು. ಅದೊಂದು ಐತಿಹಾಸಿಕ ದಿನ. ಅದೊಂದು ಐತಿಹಾಸಿಕ ಕ್ಷಣ.

ಇದು ಸ್ವಾಭಾವಿಕವಾಗಿ ಮೀಡಿಯಾ ಗಮನಕ್ಕೆ ಬರಲಿಲ್ಲ. ಪ್ರಪಂಚದಲ್ಲಿ ನಿಜವಾಗಿಯೂ ನಡೆಯುತ್ತಿರುವ ಅನೇಕ ಮುಖ್ಯ ಸಂಗತಿಗಳನ್ನು ಮೀಡಿಯಾ ವರದಿ ಮಾಡುವುದಿಲ್ಲ. ನಾವು ಓದುವ ಮತ್ತು ನೋಡುವ ವಿಷಯಗಳು ಅತಿ ಮುಖ್ಯ ಸಂಗತಿಗಳಲ್ಲ. ಇದಕ್ಕಾಗಿ ನಾವು ಯಾರನ್ನೂ ದೂರಲಾಗುವುದಿಲ್ಲ. ವ್ಯವಸ್ಥಿತ ರೀತಿ ಹಾಗಿದೆ. ಈ ವ್ಯವಸ್ಥೆ ಕೂಡ ಕುಸಿಯುತ್ತದೆ. ನ್ಯಾಯ ಸಮ್ಮತವಲ್ಲದ ಎಲ್ಲ ವ್ಯವಸ್ಥೆಗಳೂ ಕುಸಿಯುತ್ತವೆ. ಯಾವುದನ್ನು ಮಾಡುವುದರಲ್ಲಿ ಮೀಡಿಯಾ ವಿಫಲವಾದವೋ ಅದನ್ನು ಬ್ಲಾಗ್–ಗಳು ಮಾಡುತ್ತಿವೆ.

ಲೈಟ್ ಚಾನೆಲ್ಸ್ ವಿಶ್ವ ಸಂಚಲನವನ್ನು ನಾವು ಜೀವಂತವಾಗಿಡಬೇಕು ಮತ್ತು ಹರಡಬೇಕು. ನಮ್ಮದೇ ಶಾಂತಿ ಮತ್ತು ಭವಿಷ್ಯಕ್ಕಾಗಿ. ಇದು ಬಹಳ ಮುಖ್ಯ.

ಕಣ್ಣಿಗೆ ಕಾಣಿಸದ ಯಾರೋ ಒಬ್ಬರನ್ನು ಅಥವಾ ಒಂದು ವಸ್ತುವನ್ನು ನಾವು ಪ್ರೀತಿಸುವುದು ಹೇಗೆ? ಇದು ನನ್ನ ಮುಂದಿಟ್ಟ ಒಂದು ಗಂಭೀರ ಮತ್ತು ಪ್ರಾಮಾಣಿಕ ಪ್ರಶ್ನೆ. ನಾವು ಒಂದು ಹಸುವನ್ನು ನೋಡಬಹುದು, ಮುಟ್ಟಬಹುದು ಮತ್ತು ಅದನ್ನು ಪ್ರೀತಿಸಬಹುದು. ಅದರ ಹಾಲನ್ನು ಕೂಡ ಕುಡಿಯುತ್ತೇವೆ, ಹಸುವನ್ನು ತಿನ್ನುತ್ತೇವೆ ಕೂಡ! ಆದರೆ ಬೆಳಕು, ದೇವರು? ನಾವು ಈ ಬೆಳಕನ್ನು ನೋಡಲಾಗುವುದಿಲ್ಲ, ಮುಟ್ಟಲಾಗುವುದಿಲ್ಲ. ಹೇಗೆ ಪ್ರೀತಿಸಲು ಸಾಧ್ಯ! ಮತ್ತೆ, ಅದನ್ನು ಕುಡಿಯಲು ಅಥವಾ ತಿನ್ನಲು ಆಗುವುದಿಲ್ಲ! ನನ್ನ ವಿಜ್ಞಾನಿ–ಸ್ನೇಹಿತ ಇದೆಲ್ಲವನ್ನೂ ಬಹಳ ಗಂಭೀರವಾಗಿ ಕೇಳಿದ. ನಾನು ಅವನನ್ನು ಸುಮ್ಮನೆ ಒಂದು ನಿಮಿಷ ನಿಟ್ಟಿಸಿದೆ!

ನಮಗೆ ಅನೇಕ ವಸ್ತುಗಳು ಕಾಣುವುದಿಲ್ಲ ಅದರೂ ಅವು ಇವೆ ಎಂದು ಅನುಭವದಿಂದ ತಿಳಿಯುತ್ತೇವೆ. ಹಾಲಿನ ಸಿಹಿ, ಹೂವಿನ ಸುಗಂಧ, ಬೇರೆ ಭೂಮಿಗಳಿಗೆ ಇಲ್ಲಿಂದ ಹೋದ ಆತ್ಮಗಳು......ಅವೆಲ್ಲವನ್ನೂ ನಾವು ಪ್ರೀತಿಸುತ್ತೇವೆ. ಬೆಳಕು ಇದೆ, ದೇವರು ಇದ್ದಾನೆ. ಏಕೆ ಬೆಳಕನ್ನು ಪ್ರೀತಿಸಲಾಗುವುದಿಲ್ಲ!

ವ್ಯತ್ಯಾಸ ಅನುಭವದಲ್ಲಿದೆ ಎಂದು ನನ್ನ ಅನಿಸಿಕೆ. ಆದ್ದರಿಂದಲೇ ನಾವು ಧ್ಯಾನ ಮಾಡಬೇಕು ಮತ್ತು ಬೇರೆ ಸ್ತರಗಳಲ್ಲಿರುವ ವಾಸ್ತವ–ಸತ್ಯಗಳನ್ನು ಅನುಭವಿಸಬೇಕು. ಚಂದ್ರನನ್ನು ಅನುಭವಿಸುವುದು ಸುಲಭ, ಹಾಗೆಯೇ ಪೂರ್ಣ–ಬೆಳದಿಂಗಳನ್ನು ಅನುಭವಿಸುವುದು ಕೂಡ ಕಷ್ಟವಲ್ಲ.

ನಾನು ರಾಜಕಾರಿಣಿಯಲ್ಲ. ಆದರೆ ಸಹಜವಾಗಿಯೇ ನಾನು ರಾಜಕೀಯ ವಿಷಯಗಳನ್ನು ಗಮನಿಸುತ್ತೇನೆ. ಅಧ್ಯಾತ್ಮ–ದೃಷ್ಟಿಯಿಂದ ಈ ಸಾರಿಯ ಚುನಾವಣೆಗಳು ವಿಶಿಷ್ಟವಾಗಿರುತ್ತವೆ ಎಂದು ನನಗೆ ಗೊತ್ತು. ಹೊಸ ಮತ್ತು ಉತ್ತಮ ವ್ಯವಸ್ಥೆಗಳು ರೂಪುಗೊಳ್ಳಲೇಬೇಕು. ಹಳೆಯ ಮತ್ತು ನ್ಯಾಯಸಮ್ಮತವಲ್ಲದ ವ್ಯವಸ್ಥೆಗಳು ಹಿಂದೆ ಸರಿಯಲೇ ಬೇಕು. ಅತ್ಯುತ್ತಮವಾದುದಕ್ಕೆ ನಾವೆಲ್ಲರೂ ಪ್ರಾರ್ಥಿಸೋಣ.

ಮಾನಸ ಫೌಂಡೇಷನ್ (ರಿ)
ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ 562 149. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ–ಮೇಲ್: info@saptarishis.com ವೆಬ್–ಸೈಟ್: www.saptarishis.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಸಾಯಿ ಮಂಡಳಿ, ಸಂಪಿಗೆ ರೋಡ್,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.

**ಗುರೂಜಿಯವರ ಮುಂಬೈ ಭೇಟಿ**
**ದಿ: 07-04-2009, ಮಂಗಳವಾರ**
**ಸಮಯ: ಬೆಳಿಗ್ಗೆ 11 ಘಂಟೆ**
**ಸ್ಥಳ: ದೇಶ್‌ಪಾಂಡೆ ಹಾಲ್,**
**ಲೋಕಮಾನ್ಯ ಸೇವಾಸಂಘ,**
**ವಿಲೆಪಾರ್ಲೆ (ಪೂರ್ವ)**

**ಲೈಟ್ ಚಾನೆಲಿಂಗ್ ಸೆಷನ್‌ಗಳನ್ನು ಶಾಲೆಗಳು, ಕಾಲೇಜುಗಳು, ಆಫೀಸುಗಳಲ್ಲಿ ನಡೆಸಲು ಆಸಕ್ತಿಯಿರುವವರಿಗೆ ಲೈಟ್ ಚಾನೆಲಿಂಗ್ ತಂತ್ರಗಳನ್ನು ಹೊಂದಿರುವ ಡಿವಿಡಿಗಳು ಉಚಿತವಾಗಿ ದೊರೆಯುತ್ತವೆ. ಇದಕ್ಕಾಗಿ ನಮಗೆ ಬರೆಯಿರಿ.**

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 03 | ಶುಕ್ರ | ಶ್ರೀರಾಮನವಮಿ |
| 04 | ಶನಿ | ಶುಕ್ಲ ದಶಮಿ |
| 09 | ಗುರು | ಪೂರ್ಣಿಮಾ |
| 10 | ಶುಕ್ರ | ಗುಡ್ ಫ್ರೈಡೆ |
| 17 | ಶುಕ್ರ | ಕೃಷ್ಣ ಅಷ್ಟಮಿ |
| 23 | ಗುರು | ಮಾಸ ಶಿವರಾತ್ರಿ |
| 25 | ಶನಿ | ಅಮಾವಾಸ್ಯೆ |
| 27 | ಸೋಮ | ಅಕ್ಷಯ ತೃತೀಯ |

**ಓರಿಯಂಟೇಷನ್ ತರಗತಿಗಳು**
**ಆನೇಕಲ್‌ನಲ್ಲಿ**
**29-3-2009ರಂದು, ಬೆಳಿಗ್ಗೆ 11 ಘಂಟೆ**
**ತಪೋನಗರದಲ್ಲಿ**
**14-4-2009 ರಂದು, ಬೆಳಿಗ್ಗೆ 11 ಘಂಟೆ**
**(ಜೂನಿಯರ್ ಸಾಧಕರಿಗೆ)**
**15-4-2009 ರಂದು, ಬೆಳಿಗ್ಗೆ 11 ಘಂಟೆ**
**(ಸೀನಿಯರ್ ಸಾಧಕರಿಗೆ)**

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 1-2-2009 | ಸ್ವಾಮಿನಾಥನ್ ಕೆ.ಎನ್. ಮತ್ತು ಮಲ್ಲಿಕಾ ಶ್ರೀಧರ್ |
| 8-2-2009 | ಸ್ವಾಮಿನಾಥನ್ ಕೆ.ಎನ್. ಸನತ್ ಕುಮಾರ್ ಮತ್ತು ಸುಧಾ ಪೋಫಾಲೆ |
| 15-2-2009 | ಕೇಟಕಿ ತಲ್‌ವಾಲ್‌ಕರ್ ಮತ್ತು ರಮೇಶ್ ಭೋಸೇಕರ್ |
| 22-1-2009 | ಸುವರ್ಣಮ್ಮ, ವಿಜಯ್ ಮೆಂಡ್‌ಜೋಗೆ ಮತ್ತು ಪ್ರಕಾಶ್ ಉಳ್ಳಾರ |

**ಈ ತಿಂಗಳ ವಾರ್ತಾಪತ್ರಿಕೆಗಳನ್ನು ಪ್ರಾಯೋಜಿಸಿದವರು ಶ್ರೀ. ವಿಜಯಕುಮಾರ್, ಶ್ರೀ. ಬ್ರಜಬಂಧುಮಿಶ್ರ ಮತ್ತು ಶ್ರೀ. ಚಂದ್ರಶೇಖರ್ ವಿ.ಕೆ.**

**"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.**

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು | ಉಪನ್ಯಾಸಗಳು ಬೆಳಿಗ್ಗೆ 11 ರಿಂದ 12ವರೆಗೆ ವಿಶೇಷ ಧ್ಯಾನ: ಮಧ್ಯಾಹ್ನ 12 ರಿಂದ 1ರವರೆಗೆ |
| ಶುಕ್ರವಾರಗಳು | ಲೈಟ್ ಚಾನೆಲ್: ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ |
| 3ನೇ ಏಪ್ರಿಲ್ | ಶ್ರೀರಾಮನವಮಿ-ವಿಶೇಷ ಧ್ಯಾನ ಮಧ್ಯಾಹ್ನ 12 ರಿಂದ 1ರವರೆಗೆ |
| 10ನೇ ಏಪ್ರಿಲ್ | ಗುಡ್ ಫ್ರೈಡೆ - ವಿಶೇಷ ಧ್ಯಾನ ಮಧ್ಯಾಹ್ನ 12 ರಿಂದ 1ರವರೆಗೆ |

**ಗುರೂಜಿಯವರ ಭಾನುವಾರಗಳ ಉಪನ್ಯಾಸಗಳ DVD ಗಳು ಮೆಂಬರ್‌ಗಳಿಗೆ ದೊರೆಯುತ್ತವೆ. ವಿವರಗಳಿಗೆ ಮಾನಸ ಆಫೀಸನ್ನು ಸಂಪರ್ಕಿಸಿ.**

### ತಪೋನಗರ ಡೈರಿ

ಅಮರರ ತಪೋನಗರ ಅವರ ಜಯಂತಿಯನ್ನು ಆಚರಿಸಿತು. ರಿಪೇರಿಯಾಗುತ್ತಿರುವ, ಧೂಳು ತುಂಬಿದ ರಸ್ತೆಗಳೂ ಕೂಡ, ಧ್ಯಾನಿಗಳು ಸಮಾರಂಭಕ್ಕೆ ಆಗಮಿಸುವುದನ್ನು ಹಿಮ್ಮೆಟ್ಟಿಸ ಲಾಗಲಿಲ್ಲ. ಋಷಿ-ನೆಲೆಗೆ ಕರೆದೊಯ್ಯುವ ಈ ಹಾದಿ ಯಾವಾಗಲೂ ಹಳ್ಳ ಕೊಳ್ಳಗಳಿಂದ, ಕಲ್ಲು ಮಣ್ಣುಗಳಿಂದ ಕೂಡಿದೆ. ಇದು ನಮಗೆ ಅಂತಿಮ ಸತ್ಯದೆಡೆಗಿನ ಆಧ್ಯಾತ್ಮಿಕ ಪಥದಲ್ಲಿ ಬರುವ ಅಡಚಣೆಗಳನ್ನು ಸಾಂಕೇತಿಸುವಂತಿದೆ.

ಕೆಲ ದಿನಗಳ ಹಿಂದೆ ಈ ರಸ್ತೆ ರಿಪೇರಿಯಾಗುವ ಬಗ್ಗೆ ವದಂತಿಗಳಿದ್ದವು. ಆಶ್ಚರ್ಯವೆಂಬಂತೆ, ರಿಪೇರಿ ಕೆಲಸ ಶುರುವಾಯಿತು ಕೂಡ. ಇನ್ನೇನು ಹೊಸ ರಸ್ತೆಯ ಆನಂದದಲ್ಲಿ 'ಹಳೆಯ ರಸ್ತೆಯ ಕಹಿ ನೆನಪುಗಳನ್ನು' ಮರೆಯಬಹುದೆನ್ನುವಷ್ಟರಲ್ಲಿ ಈ ರಿಪೇರಿ ಕೆಲಸ ನಿಂತುಹೋಯಿತು. ಇಡೀ ರಸ್ತೆಯುದ್ದಕ್ಕೂ ಹಾಕಿರುವ ಮಣ್ಣು, ಡಾಂಬರು ಕಾಣದೆ ಧೂಳಿನ ಮಡುವಾಗಿ, ಮೊದಲಿಗಿಂತ ಹೀನ ಸ್ಥಿತಿಯಲ್ಲಿದೆ. ಆದರೆ, ತಪೋನಗರ ಮತ್ತದರ ನಿವಾಸಿಗಳು ಇದೆಲ್ಲವನ್ನೂ ಶಾಂತ ವಾಗಿಯೇ ಸ್ವೀಕರಿಸಿದ್ದಾರೆ.

ಕೆಲವು ಜನರು ಈ ತಪೋನಗರದ ಋಷಿಯ ಬಳಿ ಬಂದಿದ್ದರು. ಆದರೆ ಅವರಿಗೆ, ತಾವು ಹೇಳಿಕೊಡುವುದೇ ಮುಖ್ಯವಾಗಿತ್ತೇ ಹೊರತು ತಿಳಿದುಕೊಳ್ಳುವುದಲ್ಲ. ಅವರು ಅಧ್ಯಾತ್ಮ-ಯಾತ್ರಿಕ ರಾಗಿ ಬಂದಿದ್ದರೇ ವಿನಃ ಅನ್ವೇಷಕರಾಗಿ ಅಲ್ಲ.

ಗ್ರಹಣ ಮತ್ತು ಮಹಾಶಿವರಾತ್ರಿಯ ವಿಶೇಷ ಧ್ಯಾನಕ್ಕೆ ಬಹಳ ಜನ ಸಾಧಕರು ಸೇರಿದ್ದರು.

ಕು॥ ಸೊಲುಂಟ್ರ ಕಿಂಗ್‌ರವರ ಇರುವಿಕೆ ಒಂದು ಹೊಸತನವನ್ನು ತರುತ್ತದೆ. ನಮ್ಮ ಭಾನುವಾರದ ತರಗತಿಗಳಿಗೆ ಆಕೆ ಹಬ್ಬದ ಸಂಭ್ರಮವನ್ನು ತರುತ್ತಾರೆ.

ಬೇಸಿಗೆ, ಸಮಯಕ್ಕೆ ಮೊದಲೇ ಕಾಲಿಟ್ಟಿದೆ. ತಪೋವನ ಆಗಲೇ ನೀರಿನ ಕೊರತೆಯ ಚಿಹ್ನೆಗಳನ್ನು ತೋರಿಸುತ್ತಿದೆ. ಫೆಬ್ರವರಿ ತಿಂಗಳಲ್ಲಿ ತಪೋನಗರ ಇಡೀ ವಿಶ್ವದೆಡೆಗೆ ಕೈಚಾಚಿ, ಬೆಳಕಿನ ಸಂದೇಶವನ್ನು ಬಿತ್ತರಿಸಿತು. ಪ್ರತಿಯೊಬ್ಬರೂ ತಮ್ಮಲ್ಲಿ ಬೆಳಕನ್ನು ತುಂಬಿಕೊಂಡು ನಡೆದರು, ಬೆಳಕು ಎಲ್ಲರನ್ನೂ ತುಂಬಿ ಮುನ್ನಡೆಸಿತು.

## ಗುರೂಜಿಯವರ ನುಡಿಗಳು

(ಸಂಗ್ರಹ: ರಾಘವೇಂದ್ರ ಸೋಮಯಾಜಿ, ಅನು: ಶಿವಪ್ರಕಾಶ್ ಎಲ್.)

**01–02–2009**

**ಅಮರ ಜಯಂತಿಯಂದು –**

ಈ ಸಂದರ್ಭಗಳು ನನಗೆ ಯಾವಾಗಲೂ ಭಾವಪೂರ್ಣ, ಏಕೆಂದರೆ ನನ್ನ ಗುರು ನನ್ನೊಳಗೇ ಇದ್ದಾರೆ. ನನ್ನೊಳಗೇ ಎಲ್ಲ ಕಾಲದಲ್ಲಿ ಇದ್ದಾರೆಂದು ಭಾವಿಸಿದರೂ ನಾನು ಅವರನ್ನು ಮಿಸ್ ಮಾಡಿಕೊಳ್ಳುತ್ತೇನೆ. ಇದನ್ನು ವಿವರಿಸುವುದು ಕಷ್ಟ. ಅಮರರು ಭಾವೋದ್ವೇಗಗಳು ಇರಬೇಕು ಎಂಬುದನ್ನು ಕಲಿಸಿಕೊಟ್ಟರೂ ಅವರು ಜನರ ಭಾವೋದ್ರೇಕಗಳಿಗೆ ಉತ್ತೇಜನ ಕೊಡುತ್ತಿರಲಿಲ್ಲ. ಆದರೆ ನಾವು ಮಾತ್ರ ಭಾವಪೂರ್ಣವಾದ ಆತ್ಮೀಯ ಸಂಬಂಧ ಹೊಂದಿದ್ದೆವು. ಅವರು ಆತ್ಮಗಳಿಗೆ ಬೇಕಾದುದನ್ನು ಒದಗಿಸುತ್ತಿದ್ದರು. ಆದ್ದರಿಂದಲೇ ಅವರ ಬಳಿಗೆ ಯಾರು ಬಂದರೂ ಜನ್ಮಾಂತರ ಗಳವರೆಗೆ ಅವರೊಡನೆ ಇರುತ್ತಾರೆ.

ಅಮರರು ತಮ್ಮ ಬಳಿಗೆ ಬಂದವರನ್ನು ರಂಜಿಸುವ, ಮೋಹಗೊಳಿಸುವ ಮತ್ತು ಆಕರ್ಷಿಸುವ ವಿಧಾನಗಳನ್ನು ಬಳಸುತ್ತಿರಲಿಲ್ಲ. ಇದರಿಂದ ನಿಜವಾದ ಸಾಧನೆಗೆ ಸಿದ್ಧರಿಲ್ಲದವರು ದೂರ ಉಳಿಯುತ್ತಿದ್ದರು. ಮತ್ತು ಅವರ ಬಳಿಗೆ ಯಾರು ಬರಬೇಕೋ ಅವರು ಬಂದೇ ಬರುತ್ತಿದ್ದರು. ಅವರು ಎಲ್ಲರಿಗೂ ಒಂದೇ ಸಮನಾದ ಅವಕಾಶ, ಜ್ಞಾನ ಮತ್ತು ಪ್ರೇಮವನ್ನು ನೀಡುತ್ತಿದ್ದರು. ಅವರು ನಮ್ಮನ್ನು ಸತ್ವಯುತರನ್ನಾಗಿ ಮಾಡಿ ನಮ್ಮೊಳಗಿರುವ ಅಂತಃಶಕ್ತಿಯನ್ನು ಬಡಿದೆಬ್ಬಿಸುತ್ತಿದ್ದರು. ಪ್ರತಿಯೊಬ್ಬರೂ ತಮ್ಮಂತೆಯೇ ತೇಜೋಮಯರಾಗಿರಬೇಕೆಂಬುದು ಅವರ ಬಯಕೆಯಾಗಿತ್ತು. ಅಮರರವರು ಯಾವಾಗಲೂ ಅದಕ್ಕೆ ಉತ್ತೇಜನ ಕೊಡುತ್ತಿದ್ದರು.

ನಮಗೆ ಸಹಾಯ ಬೇಕಾದಾಗ ನಾವು ಅಮರರನ್ನು ಪ್ರಾರ್ಥಿಸಬೇಕಾಗಿಲ್ಲ ಅಥವಾ ಅವರನ್ನು ನೆನಪಿಸಿಕೊಳ್ಳುವುದೂ ಬೇಕಿಲ್ಲ. ಅವರು ಯಾವಾಗಲೂ ನಮ್ಮೊಡನೆ ಇರುತ್ತಾರೆ. ಅಮರರು ಯಾವಾಗಲೂ ನಮ್ಮ ಬಗ್ಗೆ ನಿಗಾ ವಹಿಸುತ್ತಾರೆ ಮತ್ತು ಸಹಾಯ ಮಾಡುತ್ತಾರೆ. ನಾನು ಅನೇಕ ಜನ್ಮಾಂತರಗಳಿಂದ ನನ್ನ ಗುರುವಿನೊಡನೆ ಇದ್ದೇನೆ ಮತ್ತು ಮುಂದಕ್ಕೂ ಶಾಶ್ವತವಾಗಿ ಅವರೊಡನೆ ಇರುತ್ತೇನೆ. 'ಅಮರ' ಯಾವಾಗಲೂ ಅಮರರೇ, ಎಂದರೆ ಚಿರಂತನ.

**08–02–2009**

ನಾವು ಏನಾದರೂ ಒಳ್ಳೆಯದನ್ನು ಕಂಡರೆ, ಅದನ್ನು ಇತರರೊಡನೆ ಹಂಚಿಕೊಳ್ಳಲು ಬಯಸುತ್ತೇವೆ. ಅವರು ಅದನ್ನು ಸ್ವೀಕರಿಸದಿದ್ದರೆ, ನಾವೇಕೆ ದುಃಖಿಸಬೇಕು ಅಥವಾ ಚರ್ಚೆ ಮಾಡಬೇಕು? ನಾವು ಧ್ಯಾನಿಗಳಾದವರು ಪಕ್ವತೆ ಮತ್ತು ಸಂಯಮದಿಂದ ಕೂಡಿರಬೇಕು. ನಮಗೆ ಅಗಾಧವಾದ ಸಹನೆ ಇದೆ. ಪ್ರತಿಯೊಬ್ಬರೂ ಬೆಳಕನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲದೇ ಇರುವುದರಿಂದ, ನಾವು ಈ ಕಾರ್ಯವನ್ನು ಕೈಗೊಂಡಿದ್ದೇವೆ. ಇಲ್ಲವಾದರೆ ಅದರ ಅಗತ್ಯವಿಲ್ಲ.

ನಾವು ಋಷಿಗಳ ಕಾರ್ಯವನ್ನು ಕೈಗೊಂಡಾಗ ಅದನ್ನು ನಮ್ಮ ಸ್ವಂತ ಶಕ್ತಿ ಮತ್ತು ವಿವೇಕದಿಂದ ನಿರ್ವಹಿಸುತ್ತೇವೆ. ಅನೇಕ ಸವಾಲುಗಳು, ಅಡಚಣೆಗಳು ಎದುರಾಗುತ್ತವೆ. ಅವನ್ನೆಲ್ಲ ನಮ್ಮ ಸ್ವಂತ ಶಕ್ತಿಯಿಂದ ಎದುರಿಸಬೇಕು. ಇದರಲ್ಲಿ ಸೋಲುಗಳೂ ಉಂಟಾಗಬಹುದು. ನಾವು ದೇವರ ಅಥವಾ ಋಷಿಗಳ ಕಾರ್ಯ ತೆಗೆದುಕೊಂಡಮೇಲೆ ಪೂರ್ವಭಾವಿಯಾಗಿ ಎಲ್ಲ ರೀತಿಯ ಸಹಾಯ, ಎಲ್ಲ ಸಮಯದಲ್ಲಿ ಸಿಗುತ್ತದೆಂದು ಭಾವಿಸುತ್ತೇವೆ. ಆದರೆ ವಾಸ್ತವದಲ್ಲಿ ಹಾಗಿರುವುದಿಲ್ಲ. ಕೆಲವು ಸಲ ನಾವು ಕರ್ಮಗಳನ್ನು ಕೂಡಾ ಗಳಿಸುತ್ತೇವೆ. ಇಂಥ ಕರ್ಮಗಳನ್ನು ನಾವೇ ಕಳೆದುಕೊಳ್ಳಬೇಕಾಗುತ್ತದೆ.

ಋಷಿಗಳು ಅಥವಾ ದೇವರು ಸಹಾಯ ಮಾಡುವುದಿಲ್ಲ ಎಂದಲ್ಲ, ನಮಗೆ ಅರ್ಥವಾಗ ದಿರುವ ಅನೇಕ ಸಂಕೀರ್ಣವಾದ ವಾಸ್ತವಗಳು ಮತ್ತು ಆಧ್ಯಾತ್ಮಿಕ ನಿಯಮಗಳಿವೆ. ಮನುಷ್ಯ–ದೃಷ್ಟಿಯಲ್ಲಿ ಇದು ಸಮಂಜಸವಾಗಿ ಕಾಣದಿದ್ದರೂ, ಆ ದೇವರು ನಿಷ್ಕರುಣಿ ಎಂದು ತಿಳಿಯುವುದು ತಪ್ಪು. ಅವನು ಅತ್ಯಂತ ಕರುಣಾಮಯಿ. ನಮ್ಮ ಎಲ್ಲ ಹೋರಾಟಗಳಿಗೆ ಮತ್ತು ಸೋಲುಗಳಿಗೆ ದೇವರು ಪ್ರತಿಫಲ ನೀಡುತ್ತಾನೆ. ಯಾವಾಗ ಪ್ರತಿಫಲ ಕೊಡಬೇಕು, ಯಾವಾಗ ನೋಡಿ ಕೊಳ್ಳಬೇಕು ಎಂಬುದು ಅವನಿಗೆ ತಿಳಿದಿದೆ. ಆದರೆ ನಾವು ಪ್ರತಿಫಲಗಳನ್ನೇ ಗುರಿಯಾಗಿಟ್ಟುಕೊಂಡು ಕೆಲಸಮಾಡಬಾರದು.

ನಮ್ಮ ಬಲಾಬಲಗಳನ್ನೆಲ್ಲ ತಿಳಿದೂ ನಾವು ಕಾರ್ಯವನ್ನು ಕೈಗೊಂಡಿದ್ದೇವೆ, ಕಾರಣ ನಾವು ದೇವರನ್ನು ಅಷ್ಟು ಪ್ರೀತಿಸುತ್ತೇವೆ. ನಾವು ಋಷಿಗಳನ್ನು ಎಷ್ಟು ಪ್ರೀತಿಸುತ್ತೇವೆ ಎಂದರೆ ಎಂತಹ ಪರಿಸ್ಥಿತಿಯಲ್ಲಿ ಕೂಡಾ ಕೆಲಸ ಮಾಡಲು ಬದ್ಧರಾಗಿರುತ್ತೇವೆ. ಇದು ಅರ್ಥವಾಗಬೇಕಾದರೆ ಮೊದಲು ಕಾರ್ಯಪ್ರವೃತ್ತರಾಗಬೇಕು.

**22–02–2009**

ಲೈಟ್ ಚಾನೆಲ್ಸ್ ವಿಶ್ವಸಂಚಲನದ ಮುಂದಿನ ಹಂತ, ಬೆಳಕಿನ ಎಲ್ಲ ಚಾನಲ್‌ಗಳನ್ನು ಒಂದು ಮಾಡುವುದು ಮತ್ತು ಸಾಧ್ಯವಾದರೆ ಎಲ್ಲ ಬೆಳಕಿನ ಕಾರ್ಯಕರ್ತರನ್ನು ಒಂದುಗೂಡಿಸುವುದು. ಪ್ರತಿಯೊಬ್ಬ ಬೆಳಕಿನ ಕಾರ್ಯಕರ್ತರು ತಮ್ಮದೇ ಆದ ರೀತಿಯಲ್ಲಿ ಅದ್ಭುತವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ಈ ಭೂಮಿಯ ಒಳಿತಿಗಾಗಿ 'ಬೆಳಕಿನ ಕೇಂದ್ರ ಸಮಿತಿ'ಯನ್ನು ರಚಿಸಲು ಎಲ್ಲರೂ ಒಂದಾಗಿ ಸೇರಬೇಕು. ಈ ಬೆಳಕಿನ ಕೌನ್ಸಿಲ್, ಇಡೀ ಈ ಭೂಮಿಯ ಪ್ರಜ್ಞಾ–ಪೋಷಕ. ಯಾವುದೇ ಘರ್ಷಣೆಯನ್ನು ಸಮಿತಿಗೆ ತಿಳಿಸಿದರೆ, ಇಡೀ ಮಾನವಕುಲಕ್ಕೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ಅದು ನೀಡುತ್ತದೆ.

ನಾನು ಈ ದರ್ಶನ ಬೇಗನೆ ಸಾಕಾರಗೊಳ್ಳಲಿ ಎಂದು ಬಯಸುತ್ತೇನೆ. ಇಡೀ ವಿಶ್ವ ಮೊದಲು ಬೆಳಕಿನ ಕುಟುಂಬವಾಗಬೇಕು. ಆಮೇಲೆ, ಇಡೀ ಮಾನವ ಜನಾಂಗವನ್ನು ಮಾರ್ಗದರ್ಶಿಸುವುದಕ್ಕಾಗಿ ಒಂದು ಬೆಳಕಿನ ಕೌನ್ಸಿಲ್ ಇರಬೇಕು. ಪ್ರತಿಯೊಂದು ಧರ್ಮದಿಂದ ಆಯ್ದು ರೂಪಿಸಿದ ಒಂದು ಮೌಲ್ಯ–ವ್ಯವಸ್ಥೆ ಬೇಕು. ನಾವು ಪ್ರತಿಯೊಬ್ಬರೂ ಈ ಮೌಲ್ಯವ್ಯವಸ್ಥೆಯನ್ನು ಪಾಲಿಸಿದರೆ, ಧರ್ಮದ ವಿಭಿನ್ನತೆಗಳಿಗೆ ಸಂಬಂಧಿಸಿದ ಎಲ್ಲ ಘರ್ಷಣೆಗಳು ಇಲ್ಲವಾಗುತ್ತವೆ. ಧರ್ಮ ತನ್ನಷ್ಟಕ್ಕೆ ತಾನೇ ಹಿನ್ನೆಲೆಗೆ ಸರಿಯುತ್ತದೆ. ಇಡೀ ಮಾನವ ಕುಲವೇ ಹೊಸ ಮಾರ್ಗವನ್ನು ಅನುಸರಿಸುತ್ತದೆ. ಈ ಗುರಿಯನ್ನು ಮುಟ್ಟುವ ದಿಕ್ಕಿನಲ್ಲಿ ಬೆಳಕಿನ ಚಾನೆಲ್‌ಗಳ ವಿಶ್ವಸಂಚಲನವು ಮೊದಲ ಹೆಜ್ಜೆಯಾಗಿದೆ.

---

ಒಬ್ಬ ವ್ಯಕ್ತಿ ನನ್ನನ್ನು ಕೇಳಿದರು, "ನೀವು ಬೆಳಕನ್ನು ಕಂಡು ಹಿಡಿದಿರಾ?" ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆ. ಈಗಲೂ ಜನರು "ಬೆಳಕು ಎಲ್ಲಿದೆ?" ಎಂದು ಕೇಳುತ್ತಾರೆ. ಬೆಳಕು ಎಲ್ಲೆಡೆ ಇದೆ. ಆದರೂ ನಮಗೆ ಬೆಳಕಿನ ಬಗ್ಗೆ ತಿಳಿದಿಲ್ಲ. ನಾನು ಈ ಬೆಳಕನ್ನು ಹೊಸದಾಗಿ ತಂದಿಲ್ಲ. ಬೆಳಕು ಮೊದಲಿನಿಂದಲೂ ಇದೆ. ನಾವು ಕಣ್ಣು ತೆರೆದು ನೋಡಬೇಕು ಮತ್ತು ಅದರ ಇರವನ್ನು ತಿಳಿಯಬೇಕು, ಅಷ್ಟೇ. ನಮ್ಮ ದೈನಂದಿನ ಬದುಕಿನಲ್ಲಿ ಒಂದು ಸಲ ಈ ಬೆಳಕಿನ ಬಗ್ಗೆ ಜಾಗೃತಿ ಮೂಡಿದರೆ, ಬೆಳಕು ನಮ್ಮ ಸಂಗಾತಿಯಾಗುತ್ತದೆ; ನಮ್ಮ ಜೀವನ ಬದಲಾಗುತ್ತದೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಜೀವನ ಉತ್ತಮವಾಗುತ್ತದೆ ಮತ್ತು ಈ ವಿಶ್ವ ಉತ್ತಮವಾಗುತ್ತದೆ. ಇವೆಲ್ಲ ಸಂಭವಿಸುವ ಕಾಲ ಬಂದಿದೆ. ■

## ಲೈಟ್ ಚಾನಲ್ ವಿಶ್ವ ಸಂಚಲನ – 26–2–2009

### ಸೊಲೂಂಟ್ರ ಕಿಂಗ್‌ರವರ ಭಾಷಣ

ಈಗ ನಾವೆಲ್ಲ ಆಯ್ಕೆಮಾಡಲೇಬೇಕಾದ ಕವಲು ದಾರಿಯಲ್ಲಿದ್ದೇವೆ. ನಾವು ಬೆಳಕನ್ನು ಆಯ್ಕೆ ಮಾಡಿದರೆ ಶಾಂತಿ, ಸಂತೋಷಗಳು ನಮ್ಮ ಜೀವನವನ್ನು ಬೆಳಗುತ್ತವೆ. ಹೊಸಯುಗವನ್ನು ಸ್ವಾಗತಿಸಲು ಸಿದ್ಧರಾದರೆ ಪ್ರೀತಿ, ಸಮೃದ್ಧಿಗಳು ನಮ್ಮ ಜೀವನದಲ್ಲಿ ತುಂಬುತ್ತವೆ. ಹೊಸಯುಗ ಬೆಳಕಿನ ಯುಗ. ಇದು ನಂಬಿಕೆ, ಸಹನೆ, ಸಮಾನತೆ, ಸಾಮರಸ್ಯಗಳ ಯುಗ. ಈ ಎಲ್ಲ ಗುಣಗಳು ನಮ್ಮವಾಗಬೇಕು.

ಬೆಳಕು ಇಡೀ ಸೃಷ್ಟಿಯನ್ನು ಸೃಷ್ಟಿಸಿರುವ ದೇವರಿಂದ ನಮಗೆ ಬರುತ್ತದೆ. ಬೆಳಕೇ ಬದುಕು. ಬೆಳಕಿಲ್ಲದೆ ಬದುಕಿಲ್ಲ. ಈ ಬೆಳಕು ಎಲ್ಲ ಜೀವಿಗಳಲ್ಲಿ ಹುದುಗಿದೆ. ಆದರೂ ನಾವು ಧ್ಯಾನ ಮಾಡದೆ, ಇತರರನ್ನು ಹೀಲ್ ಮಾಡಲು ಬೆಳಕನ್ನು ಚಾನಲ್ ಮಾಡದೆ, ಈ ಬೆಳಕನ್ನು ಗ್ರಹಿಸುವುದು ಕಷ್ಟ. ನಮ್ಮ ಈ ಭೌತಿಕ ಅಸ್ತಿತ್ವದಲ್ಲಿ, ನಮ್ಮ ಕಣಕಣಗಳಲ್ಲಿ ಮತ್ತು ಅಹಂ ಮಟ್ಟದಲ್ಲಿ ಅರಿವನ್ನು ಬೆಳೆಸಿಕೊಳ್ಳಲು ನಾವು ಬೆಳಕನ್ನು ಚಾನಲ್ ಮಾಡಬೇಕು.

ಬೆಳಕನ್ನು ಚಾನಲ್ ಮಾಡುತ್ತಿದ್ದಂತೆ ನಮಗೆ ಬೆಳಕಿನ ಅರಿವಿಲ್ಲದಿದ್ದರೂ ಅದು ನಮ್ಮೊಳಗೆ ಕೆಲಸ ಮಾಡುತ್ತಿರುತ್ತದೆ. ನಾವು ಎಲ್ಲೇ ಹೋಗಲಿ, ಬೆಳಕು ನಮ್ಮ ಸುತ್ತಮುತ್ತಣ ವ್ಯಕ್ತಿಗಳನ್ನು ಮತ್ತು ಎಲ್ಲ ಜೀವಿಗಳನ್ನು ಸ್ಪರ್ಶಿಸುತ್ತದೆ. ಅಲ್ಲದೆ ಅವರನ್ನು ಕೂಡ ದೈವತ್ವಕ್ಕೆ ತೆರೆಸುತ್ತದೆ.

ಈ ರಾತ್ರಿ ನಾವು ಚಾನಲ್ ಮಾಡುತ್ತಿರುವ ಬೆಳಕು ನೇರವಾಗಿ ಪರಮ–ಮೂಲದಿಂದ ಬರುತ್ತದೆ. ಬೆಳಕನ್ನು ಸ್ವೀಕರಿಸಲು ನಾವು ಸಿದ್ಧರಿರಬೇಕು. ನಾವು ಬೆಳಕನ್ನು ಚಾನಲ್ ಮಾಡುವ ಸಮಯದಲ್ಲಿ ನಮ್ಮೊಂದಿಗೆ ಈ ಮಹತ್ಕಾರ್ಯದಲ್ಲಿ ಪಾಲ್ಗೊಳ್ಳಲು ಪ್ರಪಂಚದಾದ್ಯಂತ ಕಾಯುತ್ತಿರುವ ಮಿಲಿಯಾಂತರ ಜನರರೊಂದಿಗೆ ಬೆಳಕಿನ ಮೂಲಕ ಸಂಪರ್ಕ ದಲ್ಲಿರುವುದರಿಂದ ಇಡೀ ಮಾನವ ಕುಲ ಬೆಳಕಿನ ಸೂಕ್ಷ್ಮಾತಿಸೂಕ್ಷ್ಮ ಕಂಪನಗಳಿಗೆ ಬದಲಾಗುತ್ತದೆ. ಇಂಥ ಬದಲಾವಣೆಯಿಂದ ಮಾತ್ರ ಮಾನವ ಕುಲ ದ್ವೇಷ ಮತ್ತು ಭಯ, ಅಭಾವ ಮತ್ತು ನಿರಾಕರಣೆಗಳಂಥ ಉದ್ರಿಕ್ತ ಸ್ಥಿತಿಗಳನ್ನು ದಾಟಿ ಸಮೃದ್ಧಿಯನ್ನು ಪಡೆಯಲು ಸಾಧ್ಯ.

ಕತ್ತಲ ಯುಗದಲ್ಲಿ ಅದರ ಕಂಪನಗಳ ಪ್ರಭಾವದಿಂದ ನಮ್ಮಲ್ಲಿದ್ದ ದೈವತ್ವವನ್ನು ನಾವು ಮರೆತೆವು. ಸ್ವ–ಇಚ್ಛೆಗೆ ಮಹತ್ವಕೊಟ್ಟು ಸ್ವಾರ್ಥ, ಲೋಭಗಳಿಂದ ಈ ಪ್ರಪಂಚವನ್ನು ತುಂಬಿದೆವು. ನಾವು ಬಹಳ ಸರಳವಾದ ಸತ್ಯಗಳನ್ನು ಮರೆತಿದ್ದೇವೆ. ಬಹು ಮುಖ್ಯವಾಗಿ ನಮ್ಮ ಬದುಕಿಗೆ ಜೀವತುಂಬುವ, ನಮ್ಮ ಬಾಳ ಉಸಿರಾಗಿರುವ ಬೆಳಕನ್ನು ಮರೆತಿದ್ದೇವೆ.

ಈಗ ನಾವು ಯುಗ ಬದಲಾವಣೆ ಆಗುತ್ತಿರುವ, ಬೆಳಕಿನ ಯುಗಕ್ಕೆ ಹೆಜ್ಜೆ ಇಡುವ ಪರ್ವಕಾಲದಲ್ಲಿ ಇದ್ದೇವೆ.

ನಮ್ಮ ಇಡೀ ಸೂರ್ಯಮಂಡಲ ಫೋಟಾನ್ ಬೆಲ್ಟ್ ಪ್ರವೇಶಿಸುತ್ತಿದೆ. ಇದು ಕೇಂದ್ರ ಸೂರ್ಯನಿಂದ ಬೆಳಗುವ ಪ್ರಖರ ಕಂಪನಗಳ ಬೆಳಕಿನ ಕಣಗಳನ್ನೊಳಗೊಂಡಿದೆ. ನಮ್ಮ ಗ್ಯಾಲಕ್ಸಿಯ ಮಧ್ಯದಲ್ಲಿ ಬೆಳಕಿನ ಮಿಡಿತವನ್ನು ಹೊಂದಿರುವ ಒಂದು ಬ್ಲಾಕ್ ಹೋಲ್ ಇದೆ. ಈ ಬೆಳಕಿನ ಮಿಡಿತದಿಂದ ನಮ್ಮ ಪ್ರಜ್ಞೆ ಹೆಚ್ಚು ಬೆಳೆಯುತ್ತದೆ. ವೈಯಕ್ತಿಕ ಮಟ್ಟದಲ್ಲಿ ಇದರ ಅರ್ಥವೇನೆಂದರೆ – ನಿಮ್ಮೊಳಗಿರುವ ಬೆಳಕೇ ನಿಮ್ಮನ್ನು ಬೆಳಕಾಗಿಸುತ್ತದೆ.

ನಾವು ಬೆಳಕನ್ನು ಚಾನೆಲ್ ಮಾಡಿದಾಗ ಬೆಳಕು ನಮ್ಮನ್ನು ಪ್ರಕಾಶಗೊಳಿಸುತ್ತದೆ ಮತ್ತು ಅಗಾಧವಾದ ಬೆಳಕನ್ನು ನಮ್ಮಲ್ಲಿ ಸ್ಥಾಪಿಸಿ ನಮ್ಮನ್ನು ಬೆಳಕಾಗಿಸುತ್ತದೆ. ಆಗ ನಾವು ಇಡೀ ಸೂರ್ಯಮಂಡಲದ ಪ್ರಜೆಗಳಾಗುತ್ತೇವೆ. ನಾವು ವಿಶ್ವ ಕುಟುಂಬಿಗಳಾಗುತ್ತೇವೆ. ಇದು ಕನಸಲ್ಲ ಅಥವ ಮುಂದಿನ ಯಾವುದೋ ಜನ್ಮದಲ್ಲಿ ಆಗುವ ಘಟನೆಯಲ್ಲ. ಇದು ಈಗ ಸಂಭವಿಸುತ್ತಾ ಇದೆ. ಅನೇಕರು ಇದು 2012ರಲ್ಲಿ ಆಗುತ್ತದೆ ಎನ್ನುತ್ತಾರೆ. ಆದರೆ ಇದು ಕೂಡ ಶೀಘ್ರಗತಿಯಲ್ಲಿ ಆಗಿ, ಈಗ ಫೋಟಾನ್ ಬೆಲ್ಟ್–ಅನ್ನು ಪ್ರವೇಶಿಸುತ್ತಿದ್ದೇವೆ. 2012ರಲ್ಲಿ ಸಂಭವಿಸುವ ಯುಗಪಲ್ಲಟಕ್ಕೆ ಈಗಲೇ ಸಿದ್ಧರಾಗುತ್ತಿದ್ದೇವೆ.

ಈ ಮಹತ್ಕಾರ್ಯದಲ್ಲಿ ನೀವು ಪ್ರತಿಯೊಬ್ಬರೂ ಮುಖ್ಯ. ಬೆಳಕನ್ನು ಹೆಚ್ಚು ಚಾನಲ್ ಮಾಡಿದಷ್ಟೂ ಕತ್ತಲಿನಿಂದ ಬೆಳಕಿಗೆ ಬದಲಾಗಲು ನಮ್ಮೆಲ್ಲರಿಗೂ ಸುಲಭವಾಗುತ್ತದೆ. ನಮ್ಮ ಶರೀರಗಳು ಬೆಳಕಿನ ಶರೀರಗಳಾಗುತ್ತವೆ. ಬೆಳಕು ನಮ್ಮಲ್ಲಿ ಹರಿದು, ನಮ್ಮ ಸಂಕಲ್ಪದಿಂದ ಇಡೀ ಪ್ರಪಂಚಕ್ಕೆ ಮತ್ತು ಎಲ್ಲ ಜೀವರಾಶಿಗೆ ಹರಡುತ್ತದೆ. ಬೆಳಕಿಗೆ ತನ್ನದೇ ಆದ ಬುದ್ಧಿಶಕ್ತಿ ಇದೆ. ಎಲ್ಲಿ ಹೀಲಿಂಗ್‌ನ ಅಗತ್ಯ ವಿದೆಯೋ, ಎಲ್ಲಿ ಅರಿವನ್ನು ಜಾಗೃತ ಗೊಳಿಸಬೇಕೋ ಅಲ್ಲಿಗೆ ತಲುಪುತ್ತದೆ. ಅಲ್ಲಿ ಕಾರ್ಯನಿರತವಾಗುತ್ತದೆ.

ನೀವೆಲ್ಲರೂ ಸದಾ ಬೆಳಕನ್ನು ಸ್ವೀಕರಿಸಲು ತೆರೆದಿರಿ. ಬೆಳಕನ್ನು ಎಲ್ಲ ಸೃಷ್ಟಿಗೆ ನೀಡಿ, ಹರಡಿ. ನಿಮ್ಮಲ್ಲಿ ಸದಾ ಶಾಂತಿ ಇರಲಿ. ನಿಮ್ಮ ಹೃದಯಗಳಿಂದ ಪ್ರಕಾಶಿಸುವ ಬೆಳಕಿನ ಪ್ರಭೆಯನ್ನು ಸದಾ ಅನುಭವಿಸಿ. ■



ಸೊಲುಂಟ್ರಾ ಕಿಂಗ್‌ರವರು ದೀಪ ಬೆಳಗಿಸುವುದರಿಂದ, ಸಮಾರಂಭ ಲಾಂಚ್ ಆಯಿತು.



ಸೊಲುಂಟ್ರಾ ಕಿಂಗ್‌ರವರು ಸಭಿಕರನ್ನು ಉದ್ದೇಶಿಸಿ ಮಾತನಾಡುತ್ತಿರುವುದು.

### ಸಮಾರಂಭ

2009 ಫೆಬ್ರವರಿ 26 ರಂದು ಸಾಮಾನ್ಯ ಜನ ಅಸಾಮಾನ್ಯ ಕೆಲಸವನ್ನು ಮಾಡಲು ಗುರೂಜಿ ಕೃಷ್ಣಾನಂದರವರ ಜೊತೆಗೂಡಿದರು. ಈಗಿನ ಅಸಾಧಾರಣವಾದ ಕಾಲಪಲ್ಲಟಕ್ಕೆ ಸಹಾಯ ಮಾಡುವುದಕ್ಕಾಗಿ, ಪರಮ–ಮೂಲದಿಂದ, ಒಂದು ವಿಶಿಷ್ಟವಾದ ಚೈತನ್ಯವನ್ನು ತರುವುದಕ್ಕಾಗಿ. ಆ ಸಮಾರಂಭ ಬೆಳಕಿನ ವಿಶ್ವ ಸಂಚಲನ ಕಾರ್ಯಕ್ರಮವನ್ನು ಬೃಹತ್ ಪ್ರಮಾಣದಲ್ಲಿ ಲಾಂಚ್ ಮಾಡಿತು.

ಕೋರಮಂಗಲ ಒಳಾಂಗಣ ಸ್ಟೇಡಿಯಂ ಕಾರ್ಯಕ್ರಮಕ್ಕೆ ಎಲ್ಲರೀತಿಯಲ್ಲಿ ಸಿದ್ಧವಾಗಿತ್ತು. ಕೇವಲ ಹನ್ನೆರಡು ನೂರು ಜನರನ್ನೇ ಅಲ್ಲದೇ ದೇವರುಗಳು, ಋಷಿಗಳು ಮತ್ತು ಅನೇಕ ಸೂಕ್ಷ್ಮದೇಹಿಗಳನ್ನು ಕೂಡ ಸ್ವಾಗತಿಸಿತು.

ಗುರೂಜಿ ಕೃಷ್ಣಾನಂದರವರು ಸಭೆಯನ್ನು ಉದ್ದೇಶಿಸಿ ತಮ್ಮ ಹೃದಯಾಂತರಾಳದಿಂದ ಮಾತನಾಡಿದರು. ಈಗಿನ ಪ್ರಕ್ಷುಬ್ಧ ಸಮಯದಲ್ಲಿ ಅವರು ಮಾನವ ಕುಲವನ್ನು ಪ್ರತಿನಿಧಿಸುವ ಅಗಾಧವಾದ ಜವಾಬ್ದಾರಿಯನ್ನು ಹೊತ್ತು, ಪರಮ–ಮೂಲದಿಂದ, ಮಾನವ ಊಹಿಸಲೂ ಆಗದಂಥ ಸತ್ವವುಳ್ಳ ಒಂದು ಬೃಹತ್ ಪ್ರಮಾಣದ ಮಹಾನ್–ಚೈತನ್ಯವನ್ನು ಸ್ವೀಕರಿಸಿದರು.


ಡಯಾಸ್ ಮೇಲೆ ಗುರೂಜಿಯವರ ಜೊತೆ

## ಲೈಟ್ ಚಾನಲ್ ವಿಶ್ವ ಸಂಚಲನ – 26–2–2009

### ಗುರೂಜಿಯವರ ಮಾತುಗಳು



ಗುರೂಜಿಯವರು ಬೆಳಕನ್ನು ಚಾನಲ್ ಮಾಡುತ್ತಿರುವುದು.




ಗುರೂಜಿಯವರು ಒಂದು ಸಾವಿರಕ್ಕೂ ಹೆಚ್ಚು ಸಭಿಕರಿಗೆ ಬೆಳಕಿನ ಚಾನಲ್‌ನ ಪ್ರಾಮುಖ್ಯತೆಯನ್ನು ವಿವರಿಸುತ್ತಿರುವುದು.

ಮುಂದುವರೆದಿದೆ....

ಬೆಳಕಿನ ಕಾರ್ಯಕರ್ತೆ ಮತ್ತು ನಮ್ಮ ಆದರಣೀಯ ಅತಿಥಿ ಸೊಲುಂಟ್ರಾ ಕಿಂಗ್ ಇದ್ದರು. ಆ ಮಹತ್ಕಾರ್ಯಕ್ಕೆ ಆಕೆಯ ಇರವು ಬೇಕಿತ್ತು. ಆಕೆ ಬೆಳಕಿನ ಬಗ್ಗೆ ನಿರರ್ಗಳವಾಗಿ ಮಾತನಾಡಿದರು ಅಥವಾ ಬೆಳಕೇ ಆಕೆಯ ಮುಖಾಂತರ ಮಾತ ನಾಡಿರಬಹುದು. ಈ ವಿಶ್ವಸಂಚಲನದಲ್ಲಿ ಆಕೆ ಪಾಶ್ಚಿಮಾತ್ಯ ದೇಶಗಳನ್ನು ಪ್ರತಿನಿಧಿಸಿದ್ದರು. ಗುರೂಜಿಯವರೊಂದಿಗೆ ಸಮಾರಂಭವನ್ನು ಉದ್ಘಾಟಿಸಿದರು.

ಸುಮಾರು 60 ಉತ್ಸಾಹಭರಿತ ವಾಲಂಟಿಯರ್‌ಗಳ ಗುಂಪು ಆ ಜಾಗಕ್ಕೆ ಮೆರುಗುಕೊಟ್ಟಿತ್ತು. ಅವರ ಮುಗುಳ್ನಗೆ ಸಮಾರಂಭಕ್ಕೆ ಕಳೆತಂದಿತ್ತು ಮತ್ತು ಅವರ ನೋಟಗಳಲ್ಲಿ ಸಂಭ್ರಮ ಉಕ್ಕಿ ಹರಿಯುತ್ತಿತ್ತು.

ಅಷ್ಟೊಂದು ಜನ ಕೂಡಿದ್ದರೂ, ಬೆಳಕನ್ನು ಚಾನಲ್ ಮಾಡುವ ಆ ಏಳು ನಿಮಿಷಗಳ ಕಾಲ ನಿಶ್ಚಲತೆ ತುಂಬಿತ್ತು. ಅನೇಕರು ತಮಗೆ 'ವಿಷನ್'ಗಳು ಆದುದಾಗಿಯೂ ಹಾಗೂ ಕಣ್ಣಿಗೆ ಕಾಣದ ಋಷಿಗಳನ್ನು ಮತ್ತು ದೇವರುಗಳನ್ನು ನೋಡಿದುದಾಗಿ ಕೂಡ ಹೇಳಿದರು.

ಸಮಾರಂಭ ಯಾವುದೇ ಅಡಚಣೆಗಳಿಲ್ಲದೆ ನಡೆಯಿತು. ಅದೊಂದು ಯಶಸ್ವೀ ಸಮಾರಂಭ. ■

ಆತ್ಮೀಯ ವಿಶ್ವ ಕುಟುಂಬಿಗಳೇ,

ಇದು ಒಂದು ಚಾರಿತ್ರಿಕ ದಿನ. ಇಂಥ ಘಳಿಗೆ ಹಿಂದೆ ಎಂದೂ ಬಂದಿಲ್ಲ. ನಾವು ಸಮೂಹ ಧ್ಯಾನ ಮಾಡಿದ್ದೇವೆ, ಸಮೂಹ ಪ್ರಾರ್ಥನೆ ಸಾಮಾನ್ಯ. ಆದರೆ ಈ ರೀತಿ ಬೆಳಕನ್ನು ಚಾನಲ್ ಮಾಡುವುದು, ಅದಕ್ಕಾಗಿ ಹೀಗೆ ನೂರಾರು ಜನ ಸೇರುವುದು ತುಂಬ ವಿಶೇಷ. ಇಲ್ಲಿ ಇರುವ ಜನ ಅಷ್ಟೇ ಅಲ್ಲ. ಬೇರೆ ಊರುಗಳಲ್ಲಿ, ವಿಶೇಷವಾಗಿ ಮುಂಬೈ, ಶೋಲಾಪುರ, ಪುಣೆ, ನಾಗಪುರಗಳಲ್ಲಿ ನೂರಾರು ಜನರು ದೇವಸ್ಥಾನಗಳಲ್ಲಿ, ಪ್ರಾರ್ಥನಾ ಮಂದಿರಗಳಲ್ಲಿ ಈ ಏಳೂವರೆ ಗಂಟೆಗೋಸ್ಕರ ಕಾಯುತ್ತಾ ಇದ್ದಾರೆ. ಮತ್ತೆ ನಾವು ಸಾವಿರಾರು ಜನಗಳನ್ನು ಇ–ಮೇಲ್ ಮೂಲಕ ಸಂಪರ್ಕ ಮಾಡಿದ್ದೇವೆ. ಅವರೆಲ್ಲರೂ ಈ ಘಳಿಗೆಗೋಸ್ಕರ ಕಾಯುತ್ತಿದ್ದಾರೆ. ಬರೀ ಮನುಷ್ಯರಷ್ಟೇ ಅಲ್ಲ. ಈ ವಿಶೇಷ ಘಳಿಗೆಗೋಸ್ಕರ ಸೂಕ್ಷ್ಮ ಮಟ್ಟದಲ್ಲಿರುವ ಅನೇಕ ಜೀವಿಗಳು, ಹಿಮಾಲಯದಲ್ಲಿರುವ ಋಷಿಗಳು ಕೂಡ ಕಾಯುತ್ತಿದ್ದಾರೆ. ಇದು ಅತ್ಯಂತ ವಿಶೇಷವಾದ ಘಳಿಗೆ, ನಮ್ಮ ಜೀವನದಲ್ಲಿ ಬಹಳ ಮುಖ್ಯ ಎನ್ನುವುದನ್ನು ನಾವು ಗುರುತು ಮಾಡಿಕೊಳ್ಳಬೇಕು.

ಬೆಳಕು ಅಂದರೆ ಏನು? ಹಿಂದೆ ಋಷಿಗಳು ದೇವರನ್ನು ಜ್ಯೋತಿಸ್ವರೂಪ ಎಂದು ವಿವರಿಸಿದರು. ಜ್ಯೋತಿ ದೇವರು. ಬೆಳಕು ದೇವರು. ಬೆಳಕು ವಿಶ್ವ ಚೇತನ. ಈ ಬೆಳಕು ಭೌತಿಕ ಮಟ್ಟದ ಬೆಳಕಲ್ಲ. ಇದು ಕಣ್ಣಿಗೆ ಕಾಣುವ ಬೆಳಕಲ್ಲ.

ಬೆಳಕು ಎಲ್ಲ ಕಡೆ ಇದೆ. ಹಾಗಾದರೆ ಏಕೆ ಬೆಳಕನ್ನು ಚಾನಲ್ ಮಾಡಬೇಕು. ಅದು ಬೇರೆ ಸ್ತರ, ಬೇರೆ ಕಂಪನದಲ್ಲಿ ಇದೆ. ಆದ್ದರಿಂದ ಬೆಳಕನ್ನು ನಮ್ಮ ದೇಹದೊಳಗೆ ತೆಗೆದುಕೊಂಡು ಸುತ್ತಲೂ ಹರಡಬೇಕು. ನಮ್ಮ ದೇಹ ಟ್ರಾನ್ಸ್‌ಫಾರ್‌ಮರ್ ನಂತೆ ಕೆಲಸ ಮಾಡುತ್ತದೆ.

ಈ ವಿಶ್ವಸಂಚಲನದ ಉದ್ದೇಶ ಬೆಳಕಿನ ಬಗ್ಗೆ ಅರಿವನ್ನು ಹರಡುವುದು, ಹೀಲಿಂಗ್ ಮಾಡುವುದು. ಈ ದಿನ ಮಾಡಿದ್ದು ಒಂದು ರೀತಿಯ ಹೀಲಿಂಗ್. ಮೂರು ತಿಂಗಳ ಹಿಂದೆ 26 ರಂದು ಮುಂಬೈನಲ್ಲಿ ಒಂದು ಹಲ್ಲೆಯಾಯಿತು, ಮುಂಬೈ ದೇಹದ ಮೇಲೆ ಗಾಯಗಳಾದವು, ಮನಸ್ಸಿನ ಮೇಲೆ ಏಟು ಬಿತ್ತು. ಈ ಎಲ್ಲ ಗಾಯಗಳು ಗುಣವಾಗಲಿ ಎಂದು ಹೀಲಿಂಗ್ ಮಾಡಿದೆವು. ಬೆಳಕನ್ನು ಚಾನಲ್ ಮಾಡುವಾಗ ಅದರಲ್ಲಿರುವ ಶಾಂತಿ, ಪ್ರೀತಿ, ವಿವೇಕ ಎಲ್ಲ ಕಡೆ ಹರಡಿ ಪ್ರತಿಯೊಂದು ಜೀವಿಯನ್ನು ಅಷ್ಟೇ ಅಲ್ಲ ನಿರ್ಜೀವ ವಸ್ತುಗಳನ್ನು ಕೂಡ ತುಂಬುತ್ತದೆ. ಇದನ್ನು ಅನುಭವಿಸಿ ಹೇಳಬೇಕು. ಒಂದು ರೀತಿಯ ಪ್ರಯೋಗ ಮಾಡಬೇಕು.

ಬೆಳಕನ್ನು ಉಪಯೋಗಿಸಿಕೊಳ್ಳುವುದು ಮತ್ತು ಬೆಳಕಿನಲ್ಲಿ ಎಲ್ಲರನ್ನು ಒಂದುಗೂಡಿಸುವುದು ಈ ವಿಶ್ವಸಂಚಲನದ ಉದ್ದೇಶ. ಇದು ಸಾಧ್ಯವಿದೆ. ಇಡೀ ಮಾನವ ಜನಾಂಗ ಈ ರೀತಿ ಒಂದಾಗಬಹುದು. ಹೆಚ್ಚು ಬೆಳಕನ್ನು ಚಾನಲ್ ಮಾಡಿ ಒಂದುತನವನ್ನು ಹೆಚ್ಚಿಸಿಕೊಂಡರೆ ಯುದ್ಧಗಳು, ವ್ಯಕ್ತಿಗಳ ಮಧ್ಯೆ ಘರ್ಷಣೆಗಳು ಏಕೆ ಆಗುತ್ತವೆ? ಇದು ಕನಸಲ್ಲ, ಇದೊಂದು ವಾಸ್ತವ ಆದರೆ ಯಾರೂ ಪ್ರಯತ್ನ ಮಾಡಿಲ್ಲ ಅಷ್ಟೆ.

ನಾವು ಕೇವಲ ಓಟು ಅಷ್ಟೆ. ಇದಕ್ಕಿಂತ ಹೆಚ್ಚಿಗೆ ಏನೂ ಮಾಡಲಾರೆವು ಎಂದುಕೊಳ್ಳುತ್ತೇವೆ. ಆದರೆ ಬೆಳಕನ್ನು ಚಾನಲ್ ಮಾಡುವುದರಿಂದ ನಾವು ಹೆಚ್ಚಿನ ಕೊಡುಗೆ ನೀಡಬಹುದು. ಹೆಚ್ಚು ಜನ ಚಾನಲ್ ಮಾಡುವುದರಿಂದ ಪ್ರಪಂಚವನ್ನು ಬದಲಾಯಿಸಬಹುದು. ಶುದ್ಧ ಕಂಪನಗಳು ಹರಡಿ ಅನೇಕ ಬದಲಾವಣೆಗಳಾಗುತ್ತವೆ.

ನಾನು ಹೇಳುವುದು ಯಾವುದನ್ನೂ ನೀವು ಒಪ್ಪಿಕೊಳ್ಳಬೇಕಾಗಿಲ್ಲ. ನಿಮ್ಮ ಅಂತರಾತ್ಮ ಯಾವುದು ಸರಿ ಎಂದರೆ ಅದನ್ನು ಒಪ್ಪಿಕೊಳ್ಳಿ. ನಿಮ್ಮ ಅನುಭವ ಹೇಳುವುದನ್ನು ಒಪ್ಪಿಕೊಳ್ಳಿ. ನಮಗೆ ತಿಳಿಯದ ಅನೇಕ ವಿಷಯಗಳಿವೆ. ಪುರಾಣಗಳಲ್ಲಿ ಬರುವ ಋಷಿಗಳು ಈಗಲೂ ಇದ್ದಾರೆ, ಬೇರೆ ಲೋಕದಲ್ಲಿದ್ದಾರೆ. ಅವರನ್ನು ಸಂಪರ್ಕಿಸುವುದು ಧ್ಯಾನದಿಂದ ಸುಲಭ. ನಾವು ಧ್ಯಾನ ಮಾಡಬೇಕು.

2012ರಲ್ಲಿ ನಮ್ಮ ಇಡೀ ಸೌರಮಂಡಲ ಒಂದು ವಿಶಿಷ್ಟ ಚೈತನ್ಯ ವಲಯವನ್ನು (ಫೋಟಾನ್ ಬೆಲ್ಟ್) ಪ್ರವೇಶಿಸುತ್ತದೆ. ಆಗ ಅನೇಕ ಬದಲಾವಣೆಗಳಾಗುತ್ತವೆ. ಈಗಲೇ ಕೆಲವು ಬದಲಾವಣೆಗಳು ಶುರುವಾಗಿವೆ. ಇದಕ್ಕೆ ನಾವು ತಯಾರಾಗಬೇಕು. ಇದಕ್ಕೆ ಬೆಳಕನ್ನು ಚಾನಲ್ ಮಾಡುವುದು ಬಹಳ ಮುಖ್ಯ.

70 ವರ್ಷಗಳಿಂದ ನಾನು ಈ 7 ನಿಮಿಷಗಳಿಗಾಗಿ ಕಾಯುತ್ತಿದ್ದೆ. ನನ್ನ ಜೀವನದಲ್ಲಿ ಈ ಏಳು ನಿಮಿಷಗಳು ಅತ್ಯಂತ ಅಮೂಲ್ಯವಾದವು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡದಲ್ಲಿ ಮತ್ತು ಮರಾಠಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫ಼ೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿಯವರಿಗೆ ಬಂದ ಪತ್ರಗಳಿಂದ ಆಯ್ದ ಭಾಗಗಳು

**ಸಂ: ಶ್ಯಾಮಲಾದೇವಿ; ಅನು: ಗುರುಪ್ರಸಾದ್**

ನಾವೆಲ್ಲಾ ಒಟ್ಟಿಗೆ, ಬೆಳಕಿನ ಕುಟುಂಬದ ಸದಸ್ಯರಾಗಿ ಬೆಳೆಯುತ್ತಿದ್ದೇವೆ. ಬೆಂಗಳೂರಿನಲ್ಲಿ ನಡೆಯಲಿರುವ ಲೈಟ್ ಚಾನಲ್ ವಿಶ್ವ ಸಂಚಲನದ ಒಂದು ಭಾವಚಿತ್ರವನ್ನು ನೋಡಿದೊಡನೆ, ನನ್ನ ದೈವೀ–ಹೃದಯವು ಎಲ್ಲರೊಡಗೂಡಿ ಇಡೀ ಭೂಮಂಡಲವನ್ನು ಮತ್ತು ಸಮಾರಂಭ ನಡೆಯಲಿರುವ ಜಾಗವನ್ನು ದಿವ್ಯಸತ್ಯ, ಪ್ರೇಮ ಮತ್ತು ಬೆಳಕಿನಿಂದ ತುಂಬುತ್ತಿದೆ. ಇದು ನನ್ನಲ್ಲಿ ಅತೀವ ಆನಂದವನ್ನು ತರುತ್ತಿದೆ. ನಾನು ಸಹ ಮಾನಸಿಕವಾಗಿ ದೂರದ ಆಸ್ಟ್ರೇಲಿಯಾದಿಂದ ಈ ಸಮಾರಂಭದಲ್ಲಿ ಭಾಗವಹಿಸುತ್ತೇನೆ.

—ಅಮ್ಮಾ ಅಲಿಸಿ ಮೊಆನಾ

ಲೈಟ್ ಚಾನಲಿಂಗ್ ಒಂದು ಸುಂದರ ಕೊಡುಗೆ ಹಾಗೂ ಪ್ರಾರ್ಥನೆ. ನಾನು ಅದನ್ನು ಗೌರವಿಸುತ್ತೇನೆ. ಯಥಾರ್ಥತೆ, ಸತ್ಯ, ಪ್ರೇಮ, ರಮ್ಯತೆ, ವಿಸ್ಮಯಗಳನ್ನು ಒಳಗೊಂಡಿರುವ ಬೆಳಕಿನ ವಿಶ್ವ ಸಂಚಲನಕ್ಕೆ ಯಶಸ್ಸಾಗಲಿ. —ವಿಲ್

ಲೈಟ್ ಚಾನಲ್ ವಿಶ್ವ ಸಂಚಲನ ಪ್ರಾರಂಭಿಸಿದುದಕ್ಕೆ ನಿಮಗೆ ಧನ್ಯವಾದಗಳು. ಇದು ಯಾವುದೇ ಕ್ಲಿಷ್ಟತೆ ಇಲ್ಲದ ಒಂದು ಸರಳ ಪರಿಕಲ್ಪನೆ. ಪ್ರತಿಯೊಬ್ಬರೂ ಬೆಳಕನ್ನು ನಂಬುತ್ತಾರೆ. ಈ ಕಾರಣದಿಂದ, ಚಾನಲಿಂಗ್ ಮಾಡುವುದು ಸುಲಭ.

ನಾನು ಮಾರ್ಚ್ ತಿಂಗಳ ಪತ್ರಿಕೆಯನ್ನು ಓದಿದಾಗ ಯಾರಿಗೇ ಆಗಲಿ, ಸರಳ ಪ್ರೇಮದ ಬಗ್ಗೆ ತಿಳಿಸಿಕೊಡಲು ಏಕೆ ಅಷ್ಟೊಂದು ಸಮಯ ಬೇಕಾಯಿತೆಂದು ನನಗೆ ಆಶ್ಚರ್ಯವಾಗುತ್ತದೆ. ನನಗೆ ಪ್ರೇಮದ ಮೂಲಕ ದೇವರನ್ನು ಕಾಣುವ ಹಾದಿ ಇಷ್ಟ. ಅದನ್ನು ನೀವು 'ನಮ್ಮಲ್ಲಿ ನಂಬಿಕೆ ಇದ್ದರೆ ದೇವರು ಸನಿಹದಲ್ಲೇ ಇರುತ್ತಾನೆ' ಎಂದು ಸುಂದರವಾಗಿ ತಿಳಿಸಿದ್ದೀರಿ. 'ನಿಜವಾದ ಗುರುವು ತನ್ನದೇ ಗುರಿಗಳನ್ನು ಸಾಧಿಸುವುದನ್ನು ಬಿಟ್ಟು, ಇತರರಲ್ಲಿ ಅರಿವು ಮೂಡಿಸಲು ಸದಾ ಕಷ್ಟಪಡುತ್ತಾನೆ' ಎಂಬುದು ನನ್ನ ನಂಬಿಕೆ. ನೀವು ನಮ್ಮೆಲ್ಲರನ್ನು ಬೆಳಕಿನೆಡೆಗೆ ಕರೆದೊಯ್ಯಲು ಮಾಡುತ್ತಿರುವ ತ್ಯಾಗಗಳಿಗೆ ನಾನು ಕೃತಜ್ಞಳಾಗಿದ್ದೇನೆ. —ನಂದಾ

ಪ್ರಪಂಚದಾದ್ಯಂತ ಸಹಸ್ರಾರು ಜನ ಆ ಘಳಿಗೆಯಲ್ಲಿ ಏಳು ನಿಮಿಷಗಳ ಕಾಲ ಬೆಳಕನ್ನು ಚಾನಲ್ ಮಾಡುತ್ತಾರೆ ಎಂಬ ಅರಿವಿನಲ್ಲಿ ನಾನು ಮಾಡಿದ ಏಳು ನಿಮಿಷ ಲೈಟ್ ಚಾನಲಿಂಗ್ ಒಂದು ಸುಂದರ ಅನುಭವವಾಗಿತ್ತು. ಇಂತಹ ಮಹತ್ತರ ಘಟನೆಯ ಅದ್ಭುತ ಅನುಭವದಲ್ಲಿ ನಾನು ಭಾಗಿಯಾಗಲು ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ತುಂಬು ಧನ್ಯವಾದಗಳು ಗುರೂಜಿ.

—ರಾಧಾ ಕೀರ್ತನೆ

ನಾವೆಲ್ಲಾ ಸೇರಿ ಫೆಬ್ರವರಿ 26 ರಂದು ಸಂಜೆ 7.30 ಕ್ಕೆ ಏಳು ನಿಮಿಷಗಳ ಲೈಟ್ ಚಾನಲಿಂಗ್ ಮಾಡಿದೆವು. ಆ ಸಮಯದಲ್ಲಿ ನಾನು ಸಂಪೂರ್ಣವಾಗಿ ನಿಶ್ಚಲಳಾಗಿದ್ದೆ. ತಂತ್ರ ಅಭ್ಯಾಸವೆಲ್ಲ ನಿಂತುಹೋಗಿತ್ತು. ಇಂದ್ರಿಯಗಳ ಪರಿವೆಯೇ ನನಗಿರಲಿಲ್ಲ. ಕೇವಲ ಅದ್ಭುತ ಶಾಂತಿ ನೆಲೆಸಿತ್ತು. ಈ ತರಹದ ಕಾರ್ಯಕ್ರಮಗಳು ಮಾತ್ರ ಈ ಪ್ರಪಂಚವನ್ನು ಒಂದುಗೂಡಿಸುತ್ತವೆ ಮತ್ತು ನಮ್ಮನ್ನು ಹೊಸ ಯುಗಕ್ಕೆ ಅಣಿಗೊಳಿಸುತ್ತವೆ.

—ಪ್ರಜ್ಞಾ

ಲೈಟ್ ಚಾನಲಿಂಗ್ ಬಗ್ಗೆ ಮಾಡಲಾಗಿರುವ, ಆನಿಮೇಶನ್ ಬಹಳ ವಿಶಿಷ್ಟವಾಗಿದೆ. ಈ ವೆಬ್‌ಸೈಟನ್ನು ನೋಡುವ ಯಾರಿಗಾದರೂ ಸಹ ಲೈಟ್ ಚಾನಲಿಂಗ್ ಮಾಡಬೇಕೆನಿಸುತ್ತದೆ.

—ಜಯಶ್ರೀ ವಾಸುದೇವ್

ಫೆಬ್ರವರಿ 26ರ ಸಮಾರಂಭ ನಮ್ಮೆಲ್ಲರ ಕಲ್ಪನೆಗೆ ಮೀರಿ ಅದ್ಭುತವಾಗಿತ್ತು. "ನಾನು ಈ ಏಳು ನಿಮಿಷಗಳಿಗಾಗಿ ಎಪ್ಪತ್ತು ವರುಷಗಳಿಂದ ಕಾಯುತ್ತಿದ್ದೆ" ಎಂಬ ನಿಮ್ಮ ಮಾತುಗಳು ಹೃದಯಸ್ಪರ್ಶಿಯಾಗಿತ್ತು. ಅದೇ ಸಮಯದಲ್ಲಿ ನನ್ನೊಳಗಿನ ಒಂದು ಧ್ವನಿಯು "ಇಡೀ ಸೃಷ್ಟಿಯೇ ಈ ವಿಶೇಷ ಘಟನೆಗಾಗಿ ತುಂಬಾ ಸಹನೆಯಿಂದ ಕಾಯುತ್ತಿದೆ" ಎಂದು ಹೇಳಿತು. ಆ ಇಡೀ ಏಳು ನಿಮಿಷಗಳ ಕಾಲ ನಾನು ಹಲವಾರು ದಿವ್ಯ ವ್ಯಕ್ತಿಗಳ ಸಾನಿಧ್ಯವನ್ನು ಹಾಗು ಹಲವು ವಿಧದ ಚೈತನ್ಯಗಳನ್ನು ಅನುಭವಿಸಿದೆ. —ಭಾಗ್ಯವತಿ ಬಿ.

ಸಮಾರಂಭ ಬಹಳ ಅದ್ದೂರಿಯಾಗಿತ್ತು. ಅಲ್ಲಿ ಅಗಾಧವಾದ ಬೆಳಕು ಸಂಗ್ರಹವಾಗಿತ್ತು. ಆ ಏಳು ನಿಮಿಷಗಳು ನಿಜವಾಗಿಯೂ ಅದ್ಭುತವಾಗಿತ್ತು.

—ಶೋಭಾ ರಾವ್

ಫೆಬ್ರವರಿ 26ರ ಸಮಾರಂಭದಂದು, ನಾನು ಅಲ್ಲಿ ಅಮರ ಮಹರ್ಷಿ, ವಿಶ್ವಾಮಿತ್ರ ಮಹರ್ಷಿ, ಸಪ್ತಋಷಿಗಳು, ಭಗವಾನ್ ಮೈತ್ರೇಯ ಮತ್ತು ಹಲವಾರು ಪ್ರಮುಖ ಋಷಿಗಳನ್ನು ಹಾಗು ಬಹಳ ಮಂದಿ ಸೂಕ್ಷ್ಮ ಜೀವಿಗಳನ್ನು ನೋಡಿದೆ. ಏಳು ನಿಮಿಷಗಳ ಲೈಟ್ ಚಾನಲಿಂಗ್ ಶುರುವಾದ ನಂತರ ಸೂಕ್ಷ್ಮ ಜೀವಿಯೊಬ್ಬರು ಪರಬ್ರಹ್ಮ ಲೋಕದಿಂದ ಈ ಭೂಮಿಗೆ ಇಳಿದರು. ಅವರು ಒಂದು ವಿಶೇಷ ಉಪಕರಣವನ್ನು ತಂದಿದ್ದು, ಅದನ್ನು ಎಲ್ಲಿ ಸ್ಥಾಪಿಸಬೇಕೆಂಬುದರ ಬಗ್ಗೆ ನಿಮ್ಮೊಡನೆ ಮಾತನಾಡಿ, ಅದನ್ನು ಅಲ್ಲೆ ಒಂದು ಸ್ಥಳದಲ್ಲಿ ಸ್ಥಾಪಿಸಿ ಹಿಂತಿರುಗಿ ಹೋದರು. ಅವರೇ ಆ ಉಪಕರಣವನ್ನು ನಿಯಂತ್ರಿಸುತ್ತಾರೆ. ನಾವು ಆ ಏಳು ನಿಮಿಷಗಳು ಅಗಾಧವಾದ ಬೆಳಕನ್ನು ಅನುಭವಿಸಿದೆವು. —ಪ್ರಿಯಾಂಕ ಮಿಶ್ರ

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್, ಅನು: ಉಷಾ ವಾಸನ್)

**ಪ್ರ: ಆತ್ಮಕ್ಕೆ ವಯಸ್ಸಾದಂತೆ ಚಕ್ರಗಳು ದೊಡ್ಡದಾಗುತ್ತವೆಯೇ?**

ಉ: ಆತ್ಮಕ್ಕೆ ಮುಪ್ಪಿಲ್ಲ. ಮುಪ್ಪು ದೇಹಕ್ಕೆ ಸಂಬಂಧಿಸಿದೆ. ಚಕ್ರಗಳು ಬೆಳೆಯುವುದಿಲ್ಲ. ಅವು ಯಾವಾಗಲೂ ಒಂದೇ ಗಾತ್ರದಲ್ಲಿರುತ್ತವೆ.

**ಪ್ರ: ಇತ್ತೀಚಿನ ದಿನಗಳಲ್ಲಿ ನೀವು ಅ–ಪ್ರೀತಿಯ ಬಗ್ಗೆ ಹೆಚ್ಚು ಮಾತನಾಡುತ್ತಿರುವಿರಿ. ಅ–ಪ್ರೀತಿ ಪ್ರೀತಿಯ ಅನುಪಸ್ಥಿತಿಯೇ ಅಥವಾ ಬೇರೆ ಚೈತನ್ಯವೇ?**

ಉ: ಅದು ಬೇರೆಯದೇ ಆದ ಒಂದು ಭಿನ್ನ ಸ್ಥಿತಿ. ಪ್ರೀತಿ ಹೀಲ್ ಮಾಡುತ್ತದೆ, ಅ–ಪ್ರೀತಿ ನಾಶ ಮಾಡುತ್ತದೆ.

**ಪ್ರ: ದಯವಿಟ್ಟು ಪೂಜೆಯ ಪರಿಕಲ್ಪನೆಯನ್ನು ವಿವರಿಸಿ.**

ಉ: ಪೂಜೆ ಪ್ರೀತಿ ಮತ್ತು ಕೃತಜ್ಞತೆಯನ್ನು ಅಭಿವ್ಯಕ್ತಿಸುವ ವಿಧಾನ. ಪ್ರಾರಂಭದಲ್ಲಿ ಜನರು ದೇವರೊಡನೆ ಮಾತನಾಡ ಬಲ್ಲವರಾಗಿದ್ದರು, ಪ್ರೀತಿ ಮತ್ತು ಕೃತಜ್ಞತೆಯನ್ನು ನೇರವಾಗಿ ಅಭಿವ್ಯಕ್ತ ಪಡಿಸಬಲ್ಲವರಾಗಿದ್ದರು. ಕಾಲ ಕಳೆದಂತೆ, ನಾವು ದೇವರೊಡನೆ ಸಂಭಾಷಿಸುವ ಸಾಮರ್ಥ್ಯವನ್ನು ಕಳೆದುಕೊಂಡೆವು ಮತ್ತು ದೇವರೊಡನೆ ಮಾತಾನಾಡಬಲ್ಲಂಥ ಜನರನ್ನು ಆರಿಸಿಕೊಂಡೆವು. ಅವರು ಅರ್ಚಕರಾದರು. ಕಾಲ ಗತಿಸಿದಂತೆ, ಶುದ್ಧ ಜ್ಞಾನ ನಶಿಸಿ ಅರ್ಚಕರು ಪೂಜಾವಿಧಿ, ವಿಧಾನಗಳನ್ನು ಪ್ರಾರಂಭಿಸಿದರು. ಹೀಗೆ ಪೂಜೆ ಮತ್ತು ಸಂಪ್ರದಾಯಗಳ ಪರಿಕಲ್ಪನೆಗಳು ಬಂದವು.

**ಪ್ರ: ಭೂಮಿ ಟೊಳ್ಳಾಗಿದ್ದು ಅದರ ಒಳಗಡೆ ಭೌತಿಕ ಸೂರ್ಯ ಇದೆಯೇ?**

ಉ: ಭೂಮಿ ಟೊಳ್ಳಾಗಿದೆ. ಅಲ್ಲಿ ಅಸಾಮಾನ್ಯ ಜೀವಿಗಳು ವಾಸವಾಗಿದ್ದಾರೆ. ಭೂಮಿ ಯೊಳಗೆ ಭೌತಿಕ ಸೂರ್ಯ ಇಲ್ಲ, ಆದರೆ ಅಲ್ಲಿ ಸಾಂದ್ರೀಕೃತ ಚೈತನ್ಯವಿದೆ.

**ಪ್ರ: ಅಹಂ ಮತ್ತು ಆತ್ಮಗೌರವ ಎರಡರ ವ್ಯತ್ಯಾಸವೇನು?**

ಉ: ದುರಹಂಕಾರ.

**ಪ್ರ: ಧ್ಯಾನ ಮಾಡುವ ಮೊದಲು ನಾವು ಕರ್ಪೂರ ಹಚ್ಚಿ ಜ್ವಾಲೆಯನ್ನು ದಿಟ್ಟಿಸುವಾಗ ನಮ್ಮ ದೃಷ್ಟಿಯನ್ನು ಎಲ್ಲಿ ಕೇಂದ್ರೀಕರಿಸ ಬೇಕು?**

ಉ: ನಾವು ನಮ್ಮ ದೃಷ್ಟಿಯನ್ನು ಜ್ವಾಲೆಯ ಮಧ್ಯದಲ್ಲಿ ಅಥವಾ ಇಡೀ ಜ್ವಾಲೆಯತ್ತ ಕೇಂದ್ರೀಕರಿಸಬೇಕು.

**ಪ್ರ: ಮಂತ್ರದ ಪುನರುಚ್ಚಾರಣೆ ಮನಸ್ಸನ್ನು ನಿಶ್ಶಬ್ದಗೊಳಿಸುವಲ್ಲಿ ಸಹಾಯಮಾಡುವುದೇ? ಅಥವಾ ಬೇರೆ ಚೈತನ್ಯಗಳು ಸಹಾಯ ಮಾಡುತ್ತವೆಯೇ?**

ಉ: ಮನಸ್ಸನ್ನು ನಿಶ್ಶಬ್ದಗೊಳಿಸುವುದು ಮಂತ್ರದ ಪುನರುಚ್ಚಾರಣೆ, ಚೈತನ್ಯಗಳಲ್ಲ.

**ಪ್ರ: ನಮ್ಮ ಶಾರೀರಿಕ ವ್ಯವಸ್ಥೆಯಲ್ಲಿ ಯಾವ ಶರೀರ ಬೇಗ ಆಯಾಸಗೊಳ್ಳುವುದು? ಭೌತಿಕ ಶರೀರವೇ ಅಥವಾ ಸೂಕ್ಷ್ಮ ಶರೀರವೇ?**

ಉ: ಎರಡೂ ಶರೀರಗಳು ಆಯಾಸಗೊಳ್ಳುತ್ತದೆ, ಭೌತಿಕ ಹಾಗೂ ಸೂಕ್ಷ್ಮ ಶರೀರ.

**ಪ್ರ: ಒಬ್ಬ ವ್ಯಕ್ತಿ ಸುಟ್ಟುಕೊಂಡು ಸತ್ತಾಗ, ಆತನ ಸೂಕ್ಷ್ಮ ಶರೀರಕ್ಕೆ ಕೂಡಾ ಹಾನಿ ಯಾಗುವುದೇ?**

ಉ: ಹೌದು. ಆದರೆ ಎಷ್ಟರಮಟ್ಟಿಗೆ ಎಂದು ತಿಳಿದಿಲ್ಲ.

**ಪ್ರ: ನಾವು ಪ್ರತಿ ಮಹಾಯುಗದಲ್ಲೂ ಇಲ್ಲಿ ಜನ್ಮ ತಳೆಯಬೇಕೇ?**

ಉ: ಇಲ್ಲ. ಅದರ ಅಗತ್ಯವಿಲ್ಲ.

**ಪ್ರ: ನನ್ನ ಹಿಂದಿನ ಜನ್ಮದ ಬಗ್ಗೆ ತಿಳಿದುಕೊಳ್ಳಲು ಯಾವುದಾದರೂ ದಾರಿ ಇದೆಯೇ?**

ಉ: ಹೌದು. ಅದಕ್ಕೆ ಕೆಲವು ದಾರಿಗಳು, ವಿಶೇಷ ಅಭ್ಯಾಸಗಳು ಮತ್ತು ತಂತ್ರಗಳಿವೆ. ಆದರೆ ನಮ್ಮ ಪೂರ್ವ ಜನ್ಮಕ್ಕೆ ಹೋಗಲು ಮತ್ತು ನಮ್ಮ ಬಗ್ಗೆ ತಿಳಿದುಕೊಳ್ಳಲು ನಾವು ಋಷಿಗಳಿಂದ ಅನುಮತಿಯನ್ನು ಪಡೆಯ ಬೇಕು.


**ಪ್ರ: ಆರಾಧನೆ ಮತ್ತು ಧ್ಯಾನ ಎರಡರ ನಡುವಿನ ವ್ಯತ್ಯಾಸವೇನು?**

ಉ: ನಾವು ಆರಾಧಿಸುವಾಗ ನಮ್ಮ ಭಕ್ತಿ ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇವೆ, ನಾವು ದೇವರನ್ನು ಹೊಗಳುತ್ತೇವೆ ಮತ್ತು ಅವನಿಗೆ ಕಾಣಿಕೆಗಳನ್ನು ಅರ್ಪಿಸುತ್ತೇವೆ. ಆದರೆ ನಾವು ದೇವರನ್ನು ದೂರವಿಡುತ್ತೇವೆ. ಧ್ಯಾನದಲ್ಲಿ ನಾವು ದೇವರನ್ನು ಅನುಭವಿಸುತ್ತೇವೆ, ಶರಣಾಗುತ್ತೇವೆ ಮತ್ತು ಭಗವಂತನಲ್ಲಿ ಲೀನವಾಗುತ್ತೇವೆ. ಧ್ಯಾನದ ಕೊನೆಯ ಹಂತದಲ್ಲಿ ನಾವೇ ಅವನಾಗುತ್ತೇವೆ. ಆರಾಧನೆ ದ್ವೈತ ಕ್ರಿಯೆ, ಧ್ಯಾನ ಅದ್ವೈತ ಕ್ರಿಯೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| iGuruji | 150/- |
| Living in the Light of My Guru | 220/- |
| A Package from the Rishis (containing 5 Booklets) | 250/- |
| - How to Meditate | |
| - Dhyana Yoga | |
| - Descent of Soul | |
| - Practising Shambala Principles | |
| - Astral Ventures of A Modern Rishi | |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Patanjali Yoga Sutra | (out of print) |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ | 150/- |
| ಅನಿಸಿಕೆಗಳು | 120/- |
| ಋಷಿಗಳಿಂದ ಬಂದ ಕೊಡುಗೆ (ಐದು ಪುಸ್ತಕಗಳು) | 250/- |
| – ಧ್ಯಾನ ಮಾಡುವುದು ಹೇಗೆ | |
| – ಧ್ಯಾನ ಯೋಗ | |
| – ಆತ್ಮದ ಅವರೋಹಣ | |
| – ಶಂಬಲ ನಿಯಮಗಳ ಅಭ್ಯಾಸ | |
| – ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| ध्यान कैसे करे (Hindi) | 50/- |
| प्रकाशमय जीवन (Hindi) | 10/- |
| தியானம் சைய்வது எப்படி | 50/- |
| ஒளியின் வாயில்கள் | 200/- |
| ஒளீயீல் வாழ்க்கை | 10/- |
| व्ञ्ञण टश्वत्रि–स्ण य्ष्ट | 50/- |
| "थ्ख्व्रृणटत्र–स्ण | 10/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



ಗುರೂಜಿ ಕೃಷ್ಣಾನಂದ (1939)

## ಮಾನಸ ಫೌಂಡೇಷನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

## ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

## ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

## ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

## ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

## ಲೈಟ್ ಚಾನೆಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 11 ರಿಂದ 1 ರವರೆಗೆ ಗುರೂಜಿಯವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

## ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

## ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಷನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಸುಧಾಕರ್, ಅನು: ಸ್ವರ್ಣಲತ)

ನಾನು ಸಹಸ್ರಾರ ಚಕ್ರದಲ್ಲಿ ಧ್ಯಾನ ಮಾಡುತ್ತಿರುವಾಗ, ಚೈತನ್ಯಗಳು ಸಹಸ್ರಾರದಿಂದ ಮೂಲಾಧಾರದವರೆಗೆ ಹರಿದು ಎಲ್ಲ ಚಕ್ರಗಳೂ ಚೈತನ್ಯಭರಿತವಾದ ಅನುಭವವಾಯಿತು. ಚಕ್ರಗಳಿಗೆ ಸಂಬಂಧಿಸಿದ ಜಾಗಗಳ ಹಿಂಬದಿಯಲ್ಲಿ ಒಂದು ರೀತಿಯ ಮಿಡಿತ ಉಂಟಾಗಿ, ಆಜ್ಞಾಚಕ್ರದಿಂದ ಮೂಲಾಧಾರ ಚಕ್ರದವರೆಗೆ ಅವುಗಳ ಮೂರು ಆಯಾಮದ ಅನುಭವವಾಯಿತು. ಪ್ರಾರಂಭದಲ್ಲಿ ನಾನು ಅಭ್ಯಾಸ ಮಾಡುವ ತಂತ್ರದ ಅರಿವಿರುತ್ತದೆ ಆಮೇಲೆ ನಾನು ಯೋಗನಿದ್ರೆಗೆ ಜಾರುತ್ತೇನೆ.

—ಕೆ. ಪಿ. ಶ್ರೀನಿವಾಸ್

ನಾನು ಧ್ಯಾನ ಮಾಡಲು ಪ್ರಾರಂಭಿಸಿ, ಶಂಬಲ ತತ್ವಗಳು ಮತ್ತು ಬೆಳಕನ್ನು ಚಾನಲ್ ಮಾಡುತ್ತಿರುವಾಗಿನಿಂದ ನನಗೆ ಯಾವಾಗಲೂ ಸುಂದರವಾದ ನೇರಳೆ ಬಣ್ಣದ ಅನುಭವ ವಾಗುತ್ತದೆ. ಈ ಅನುಭವ ನನ್ನಲ್ಲಿ ಶಾಂತಿ ಮತ್ತು ತೃಪ್ತಿಗಳನ್ನು ತಂದಿದೆ. ದಿನದಿನಕ್ಕೆ ಈ ಬೆಳಕು ಹೆಚ್ಚು ಪ್ರಖರವಾಗುತ್ತಿದ್ದು ಅದರಿಂದ ನಾನು ಆವರಿಸಲ್ಪಡುತ್ತೇನೆ. —ಫೆರೋಜ಼ಾ ಪಾಂಡೆ

ನನ್ನ ಹುಟ್ಟುಹಬ್ಬದ ದಿನ ಮಧ್ಯರಾತ್ರಿ ನಾನು ತಪೋನಗರದಲ್ಲಿದ್ದಂತೆ ಕನಸಾಯಿತು. ಅಲ್ಲಿ ಅನೇಕ ತೂಗಾಡುತ್ತಿರುವ ಉಯ್ಯಾಲೆಗಳಿದ್ದವು ಆದರೆ ಅವುಗಳಲ್ಲಿ ಯಾರೂ ಇರಲಿಲ್ಲ.

ನನ್ನ ಉಪನ್ಯಾಸಕರೊಬ್ಬರು ನನ್ನನ್ನು ತಪ್ಪಾಗಿ ಅರ್ಥ ಮಾಡಿಕೊಂಡು ನನ್ನ ಮೇಲೆ ಕೋಪಗೊಂಡಿದ್ದರು. ತಮ್ಮ ಕೋಪವನ್ನು ತೋರಿಸಿಕೊಳ್ಳಲು ಒಂದು ಚಿಕ್ಕ ಸಂದರ್ಭವನ್ನು ಕೂಡ ಬಿಡುತ್ತಿರಲಿಲ್ಲ. ನಾನು ತರಗತಿಯಲ್ಲಿಯೇ ಅವರಿಗೆ ಬೆಳಕನ್ನು ಕಳುಹಿಸಿದೆ. ಆಶ್ಚರ್ಯಕರವಾಗಿ ತಕ್ಷಣವೇ ಅವರಲ್ಲಿ ಬದಲಾವಣೆಯಾಯಿತು ಮತ್ತು ಅವರು ಸೌಜನ್ಯದಿಂದ ವರ್ತಿಸಿದರು. ನನ್ನನ್ನು ನೋಯಿಸಿದ್ದಕ್ಕಾಗಿ ಕ್ಷಮೆ ಕೂಡ ಕೇಳಿದರು.

—ಅರ್ಚನ ಪಿಳ್ಳೈ

ತಪೋನಗರದಿಂದ ನನಗೆ ಮುಂದಿನ ಪಾಠ ಬಂದಿದ್ದು ಅದರ ಪ್ರಕಾರ ನನ್ನನ್ನು ಮುಂದಿನ ಹಂತಕ್ಕೆ ಇನಿಷಿಯೇಟ್ ಮಾಡುವಂತೆ ಪ್ರಾರ್ಥಿಸಿದೆ. ಆ ಸಮಯದಲ್ಲಿ ಒಂದು ಪ್ರಕಾಶಮಾನವಾದ ಬೆಳಕನ್ನು ನೋಡಿದೆ. ಋಷಿಯೊಬ್ಬರು ಬೆಳಕಿನ ರೂಪದಲ್ಲಿ, ನನ್ನನ್ನು ಇನಿಷಿಯೇಟ್ ಮಾಡಲು ಬಂದಿರುವರೆಂದು ತಿಳಿದು ನನಗೆ ತುಂಬ ಸಂತೋಷವಾಯಿತು. —ಮಾಧವಿ ಖೇಡೇಕರ್

ನಾನು ಡಿಸೆಂಬರ್ 15ರ ಮಧ್ಯರಾತ್ರಿ ಧ್ಯಾನಮಾಡಿ ನಮ್ಮ ಸಪ್ತಋಷಿಗಳಿಗೆ ಬೀಳ್ಕೊಡುಗೆ ನೀಡಿ ಹೊಸ ಋಷಿಗಳ ತಂಡವನ್ನು ಆಹ್ವಾನಿಸಿದೆ. ನಾನು ಸಪ್ತಋಷಿಗಳನ್ನು ಎಲ್ಲಿ ಹೋಗುತ್ತಾರೆಂದು ಕೇಳಿದಾಗ, ತಾವು ಬೇರೊಂದು ಲೋಕದಲ್ಲಿ ಒಂದು ಗುಟ್ಟಾದ ಪ್ರದೇಶಕ್ಕೆ ಹೋಗುವುದಾಗಿಯೂ, ನಮಗೆ ಅದನ್ನು ತಿಳಿದುಕೊಳ್ಳುವ ಅಗತ್ಯ ಇಲ್ಲವೆಂದೂ ಅವರು ಹೇಳಿದರು. ನಂತರ ಹೊಸ ಋಷಿಗಳ ಬಗ್ಗೆ ವಿಶ್ವಾಮಿತ್ರ ಮಹರ್ಷಿಗಳನ್ನು ಕೇಳಿದೆ. ಆಗ ಅವರು ವೈಶಂಪಾಯನ ಮಹರ್ಷಿಗಳು ಬಂದಿರುವುದಾಗಿ ತಿಳಿಸಿದರು. ನನ್ನ ಯಜಮಾನರೂ ಇದೇ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕೇಳಿದಾಗಲೂ, ಅವರಿಗೂ ವೈಶಂಪಾಯನ ಮಹರ್ಷಿಗಳು ಬಂದಿರುವುದಾಗಿ ಋಷಿಗಳು ಉತ್ತರಿಸಿದರು.

ಕೆಲವು ದಿನಗಳ ಹಿಂದೆ ನನ್ನ ಮಗಳಿಗೆ ವಿಪರೀತ ಕೆಮ್ಮಿತ್ತು. ಅವಳು ನರಳುವುದನ್ನು ನೋಡಲಾರದೆ, ಅವಳ ಕೆಮ್ಮನ್ನು ನನಗೆ ವರ್ಗಾಯಿಸಲು ಋಷಿಗಳಲ್ಲಿ ಬೇಡಿಕೊಂಡೆ. ಮಾರನೇ ದಿನವೇ ಅವಳಲ್ಲಿ ಸುಧಾರಣೆಯಾಯಿತು. ಬದಲಾಗಿ ನನಗೆ ಕೆಮ್ಮು ಬಂದಿತ್ತು. ಆ ದಿನವೇ ನಾನು ಅಂತರ ಮಾನಸದಲ್ಲಿ 'ಐಗುರೂಜಿ' ಚರ್ಚೆಯಲ್ಲಿ ಭಾಗವಹಿಸಬೇಕಿತ್ತು. ಚರ್ಚೆ ಶುರುವಾಗುವ ಮೊದಲು, ಅದು ಮುಗಿಯುವವರೆಗೆ ನನಗೆ ಕೆಮ್ಮು ಬರದಿರಲಿ ಎಂದು ವಿಶ್ವಾಮಿತ್ರ ಮಹರ್ಷಿಗಳನ್ನು ಪ್ರಾರ್ಥಿಸಿದೆ. ಅದು ಮುಗಿಯುವವರೆಗೆ ನನಗೆ ಕೆಮ್ಮು ಬರಲಿಲ್ಲ.

ತಪೋನಗರದ ನಮ್ಮ ಮನೆಯಲ್ಲಿ ನನ್ನ ಮುಂದೆ ಬಿಳಿಯ ಛಾಯೆಯನ್ನು ಯಾವಾಗಲೂ ನೋಡುತ್ತೇನೆ. ಧ್ಯಾನ ಮಾಡುವಾಗ ಋಷಿಗಳನ್ನು ಅದರ ಬಗ್ಗೆ ಕೇಳಿದಾಗ, ಅವರು ಅದು ನಮ್ಮ ರಕ್ಷಣೆಗಾಗಿ ಅಲ್ಲಿ ಇದೆ ಎಂದು ತಿಳಿಸಿದರು. ನಾವು ಸಂತೋಷವಾಗಿದ್ದರೆ ಆ ಛಾಯೆಯೂ ಸಂತೋಷವಾಗಿರುತ್ತದೆ, ನಮಗೆ ದುಃಖವಾದರೆ ಅದಕ್ಕೂ ದುಃಖವಾಗುವುದೆಂದು ಋಷಿಗಳು ತಿಳಿಸಿದರು. ಆಕೆ ವಿರಾಗಿಣಿ. ನಾವು ಆಕೆಗೆ ಗಮನಕೊಡದಿದ್ದರೂ ಅಥವಾ ಆಕೆಯನ್ನು ಗೌರವಿಸದಿದ್ದರೂ ಆಕೆಗೆ ಕೋಪ ಬರುವುದಿಲ್ಲ ಏಕೆಂದರೆ ಆಕೆ ಇವೆಲ್ಲವನ್ನೂ ಮೀರಿದ ಮಟ್ಟದಲ್ಲಿದ್ದಾಳೆ. ರಕ್ಷಣೆ ಕೊಡುವುದಷ್ಟೇ ಆಕೆಯ ಕೆಲಸ. ಆಕೆ ಬೆಳಕಿನ ರೂಪದಲ್ಲಿ ನಮ್ಮ ಜೊತೆ ಇದ್ದಾಳೆ ಎಂದು ತಿಳಿಸಿದರು. —ಪ್ರಿಯಾಂಕ ಮಿತ್ರ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149 ಮಾನಸ ಫೌಂಡೇಷನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಪ್ರಕಾಶನ ಸ್ಥಳ : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ